ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



2024ರ ಐಪಿಎಲ್‌ನಲ್ಲಿ ಕೋಲ್ಕತ್ತಾ ನೈಟ್‌ರೈಡರ್ಸ್ ತಂಡವು ಪ್ರಶಸ್ತಿ ಗೆದ್ದ ನಂತರ ನಾಯಕ ಶ್ರೇಯಸ್ ಅಯ್ಯರ್ ಹಾಗೂ ಆರಂಭಿಕ ಆಟಗಾರ ಫಿಲ್ ಸಾಲ್ಟ್ ಅವರನ್ನು ಕೈಬಿಟ್ಟು ಕೆಕೆಆರ್ ಫ್ರಾಂಚೈಸಿಯು ತಪ್ಪು ಮಾಡಿದೆ ಎಂದು ಮಾಜಿ ಕ್ರಿಕೆಟಿಗ ಅನಿಲ್ ಕುಂಬ್ಳೆ ಅಭಿಪ್ರಾಯಪಟ್ಟಿದ್ದಾರೆ.

15 ಮಾರ್ಚ್ 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 5 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಉಪ ಚುನಾವಣೆ: ಗರಿಗೆದರಿದ ರಾಜಕೀಯ ಚಟುವಟಿಕೆ » 2


ಬಂಜೆಂಬ ಶಬುದವ ಬಿಡಿಸಿದವರ ನೋವು-ನಲಿವಿನ ಕಥೆ


ವಿವಿಧ ಬೇಡಿಕೆಗಳ ಈಡೇರಿಸಲು ಒತ್ತಾಯ » 4

## ಗಲ್ಫ್ ರಾಷ್ಟ್ರಗಳ ಮೇಲೆ ದಾಳಿ: ತೈಲ ಘಟಕ ಬಂದ್

### ಉತ್ಪಾದನೆ ಸ್ಥಗಿತಗೊಳಿಸಿದ ಯುಎಇ, ಕತಾರ್, ಕುವೈತ್ | ಮತ್ತಷ್ಟು ಬಿಗಡಾಯಿಸಲಿದೆ ಇಂಧನ ಬಿಕ್ಕಟ್ಟು

• ಪ್ರಜೋದಯ ವರದಿ

**ನವದೆಹಲಿ:** ಗಲ್ಫ್ ರಾಷ್ಟ್ರಗಳಲ್ಲಿನ ತೈಲ ಮತ್ತು ಇತರೆ ಮೂಲಸೌಕರ್ಯಗಳನ್ನು ಗುರಿಯಾಗಿಸಿ ಕೊಂಡು ಇರಾನ್ ಸೇನೆ ಶನಿವಾರ ಕೂಡ ದಾಳಿ ಮುಂದುವರೆಸಿದ ಪರಿಣಾಮ ಯುಎಇ, ಕತಾರ್, ಕುವೈತ್ ಬಹರೇನ್ ದೇಶಗಳು ಕೆಲ ತೈಲ ಉತ್ಪಾದನಾ ಘಟಕಗಳನ್ನು ಬಂದ್ ಮಾಡಿವೆ. ಇದರಿಂದ ಮುಂದಿನ ದಿನಗಳಲ್ಲಿ ತೈಲ ಬಿಕ್ಕಟ್ಟು ಮತ್ತಷ್ಟು ಬಿಗಡಾಯಿಸಲಿದೆ.

ಯುಎಇಯಲ್ಲಿರುವ ಫುಜೈರಾದಲ್ಲಿ ತೈಲ ಉತ್ಪಾದನ ಘಟಕಗಳನ್ನು ತಾತ್ಕಾಲಿಕವಾಗಿ ಸ್ಥಗಿತ ಗೊಳಿಸಲಾಗಿದೆ. ಅದೇ ರೀತಿ ಬಹರೇನ್, ಕತಾರ್, ಕುವೈತ್‌ನಲ್ಲಿರುವ ಕೆಲವು ಘಟಕ ಗಳನ್ನು ಮುಚ್ಚ ಲಾಗಿದೆ. ಇರಾನ್ ಕಳೆದ ಎರಡು ದಿನಗಳಿಂದ ಡ್ರೋಣ್ ಹಾಗು ಕ್ಷಿಪಣಿ ದಾಳಿ ನಡೆಸುತ್ತಿರುವು ದರಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸ್ಥಳೀಯ ಆಡಳಿತದ ವಕ್ತಾರರು ತಿಳಿಸಿದ್ದಾರೆ.

ಅಮೇರಿಕಾದ ಸೇನಾ ನೆಲೆಗಳು ಇರುವ ದೇಶಗಳ ಮೇಲೆ ದಾಳಿ ಮುಂದುವರಿಸುವಂತೆ ಇರಾನ್‌ನ ನೂತನ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿ ಅವರು ಹೇಳಿದ್ದರು. ಅದರ ಬೆನ್ನಲ್ಲೇ ಈ ದಾಳಿ ನಡೆದಿದೆ. ಶುಕ್ರವಾರ ಮತ್ತು ಶನಿವಾರ ದುಬೈ, ಅಮೇರಿಕಾ ರಾಯಭಾರಿ ಕಚೇರಿಯ ಕಟ್ಟಡದ ಮೇಲೆ ಡ್ರೋಣ್ ದಾಳಿ ನಡೆಸಲಾಗಿದ್ದು ಕಟ್ಟಡಕ್ಕೆ ಹಾನಿಯಾಗಿದೆ. ಆದರೆ ಯಾವುದೇ ಸಾವು-ನೋವು ಸಂಭವಿಸಿಲ್ಲ.

ಹೊರ್ಮುಜ್ ಜಲಸಂಧಿ ಮೂಲಕ ಸಾಗುವ ಹಡಗುಗಳಿಗೆ ಅಗತ್ಯವಿದ್ದರೆ ಅಮೇರಿಕಾ ನೌಕಾ ಪಡೆಯು ಬೆಂಗಾವಲು ಒದಗಿಸಲಾಗುವುದು ಮತ್ತು ಮುಂದಿನ ವಾರ ಇರಾನ್ ಮೇಲೆ ಇನ್ನಷ್ಟು ದಾಳಿ ನಡೆಯಲಿದೆ ಎಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ.

ಇರಾನ್ ಬಳಿ ಇದೀಗ ನೌಕಾಪಡೆ ಮತ್ತು ವಾಯು ಪಡೆ ಇಲ್ಲ. ಅವರಲ್ಲಿದ್ದ ಕ್ಷಿಪಣಿಗಳು ಮತ್ತು ಡ್ರೋನ್ ಗಳನ್ನು ನಾಶಪಡಿಸಲಾಗಿದೆ. ಅವರ ನಾಯಕರನ್ನೂ ಹತ್ಯೆ ಮಾಡಲಾಗಿದೆ ಎಂದು ಟ್ರಂಪ್ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ. ಇರಾನ್ ಹಾರಿಸಿದ 50 ಡ್ರೋನ್‌ಗಳನ್ನು ಸೌದಿ ಅರೇಬಿಯಾದ ವಾಯು ರಕ್ಷಣಾ ವ್ಯವಸ್ಥೆ ನಾಶ ಪಡಿಸಿದೆ. ಒಮಾನ್‌ನ ಸೊಹಾರ್‌ನಲ್ಲಿರುವ ಕೈಗಾರಿಕಾ ಪ್ರದೇಶಕ್ಕೆ ಎರಡು ಡ್ರೋನ್‌ಗಳು ಅಪ್ಪಳಿಸಿ ಇಬ್ಬರು ವಿದೇಶಿ ಪ್ರಜೆಗಳು ಮೃತ ಪಟ್ಟಿದ್ದಾರೆ ಎಂದು ಒಮಾನ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಬಹರೇನ್‌ನಲ್ಲಿ ದಾಳಿಯ ಬಗ್ಗೆ ಎಚ್ಚರಿಕೆ ನೀಡುವ ಸೈರನ್‌ಗಳು ಮೊಳಗಿದವು. ದುಬೈನಲ್ಲಿ ಕೈಗಾರಿಕಾ ಪ್ರದೇಶದಿಂದ ದಟ್ಟ ಹೊಗೆ ಎದ್ದಿದ್ದು, ಕ್ಷಿಪಣಿಯ ಅವಶೇಷ ಬಿದ್ದು ಬೆಂಕಿ ಹೊತ್ತಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದುಬೈ ಇಂಟರ್‌ನ್ಯಾಷನಲ್ ಫೈನಾನ್ಶಿಯಲ್ ಸೆಂಟರ್ ನಲ್ಲಿರುವ ಕಟ್ಟಡದ ಮೇಲೆ ಕ್ಷಿಪಣಿಯ ಅವಶೇಷ ಬಿದ್ದು ಹಾನಿ ಉಂಟಾಗಿದೆ.



**ಯುದ್ಧರಂಗಕ್ಕೆ ಉತ್ತರ ಕೊರಿಯಾ ಪ್ರವೇಶ**

ಮಧ್ಯಪ್ರಾಚ್ಯ ಯುದ್ಧಗ್ರಸ್ತವಾಗಿರುವಾಗಲೇ ಇತ್ತ ಉತ್ತರ ಕೊರಿಯಾ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಯುದ್ಧರಂಗಕ್ಕೆ ಪ್ರವೇಶಿಸಿ, 10ಕ್ಕಿಂತ ಹೆಚ್ಚು ಗುರುತು ಸಿಗದೇ ಇರುವ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಉಡಾವಣೆ ಮಾಡಿಸಿದ್ದಾರೆ.

ದಕ್ಷಿಣ ಕೊರಿಯಾ ಹಾಗು ಅಮೇರಿಕಾ ಜಂಟಿ ಸೇನಾ ತಾಲೀಮಿಗೆ ಸಂಬಂಧಿಸಿದಂತೆ ಉತ್ತರ ಕೊರಿಯಾ ಎಚ್ಚರಿಕೆ ನೀಡಿದ ಬೆನ್ನಲ್ಲೇ ಈ ಕ್ಷಿಪಣಿ ದಾಳಿ ಬಂದಿದೆ. ಜಪಾನ್‌ನ ಸಮುದ್ರ ದೆಡೆಗೆ ಈ ಕ್ಷಿಪಣಿ ದಾಳಿ ನಡೆದಿದೆ. ಸಿಯೋಲ್ ನ ಸೇನೆ ಕ್ಷಿಪಣಿ ದಾಳಿಯನ್ನು ದೃಢಪಡಿಸಿದೆ.

**ಭಾರತದ 2 ಹಡಗುಗಳಿಗೆ ಅನುಮತಿ**

ಭಾರತದ ಧ್ವಜ ಇರುವ, ಎಲ್‌ಪಿಜಿ ಹೊತ್ತ ಎರಡು ಹಡಗುಗಳಿಗೆ ಹೊರ್ಮುಜ್ ಜಲಸಂಧಿ ದಾಟಲು ಇರಾನ್ ಅಧಿಕಾರಿಗಳು ಅನುಮತಿ ನೀಡಿದ್ದಾರೆ.

ಶಿವಾಲಿಕ್ ಎಂಬ ಹಡಗು ಹೊರ್ಮುಜ್ ಜಲಸಂಧಿ ದಾಟಿದ್ದು, ಸದ್ಯ ಒಮಾನ್ ಕೊಲ್ಲಿಯನ್ನು ತಲುಪಿದೆ. ಇದು ಮಾ.21 ರಂದು ಭಾರತ ತಲುಪಲಿದೆ. ಭಾರತದ ಧ್ವಜ ಹೊಂದಿರುವ 24 ಹಡಗುಗಳು ಮತ್ತು 668 ನಾವಿಕರು ಸದ್ಯ ಪರ್ಷಿಯಾದ ಕೊಲ್ಲಿ ಯಲ್ಲಿದ್ದಾರೆ. 76 ನಾವಿಕರು ಮೂರು ಹಡಗು ಗಳು ಸದ್ಯ ಹೊರ್ಮುಜ್ ಜಲಸಂಧಿಯ ಪೂರ್ವ ಭಾಗದಲ್ಲಿವೆ ಎಂದು ಹೇಳಿದೆ.

## ನೆಮ್ಮದಿ ಮೈಗೂಡಿಸಿಕೊಳ್ಳದಿದ್ದರೆ ಅನರ್ಥಗಳೇ ಹೆಚ್ಚು: ಚುಂಚಶ್ರೀ

• ಪ್ರಜೋದಯ ವರದಿ

**ಅರಕಲಗೂಡು:** ಲೌಕಿಕ ಬದುಕಿನಲ್ಲಿ ಕಣ್ಣಿನ ಆಕರ್ಷಣೆಗೆ ಒತ್ತು ನೀಡುವ ಬದಲು ಮಾನಸಿಕ ವಾಗಿ ನೆಮ್ಮದಿ ನೀಡುವ ಸಂಗತಿಗಳನ್ನು ಮೈಗೂಡಿಸಿ ಕೊಳ್ಳದಿದ್ದರೆ ಅನರ್ಥಗಳು ಹೆಚ್ಚುತ್ತ ವೆಂದು ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಚಿಕ್ಕಬೊಮ್ಮಹಳ್ಳಿಯ ಶ್ರೀ ರಂಗನಾಥಸ್ವಾಮಿ ರಥೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಸಭೆ ಯಲ್ಲಿ ಆಶೀರ್ವಚನ ನೀಡಿದ ಅವರು, ಬದುಕೆಂಬ ಜಾತ್ರೆಯಲ್ಲಿ ಅಗತ್ಯವಾದು ದಕ್ಕಿಂತ ಅನವಶ್ಯಕತೆಗಳ ಬಗ್ಗೆ ಮನುಷ್ಯ ಆಕರ್ಷಿತನಾಗುತ್ತಿದ್ದು ವಾಸ್ತವ ಅರ್ಥವಾಗುವವರೆಗೆ ಅವನಿಗೆ ಮೋಕ್ಷ ಸಿಗದು. ಬದುಕು ಸಾರ್ಥಕತೆಯತ್ತ ಸಾಗಲು ಅಗತ್ಯವಿ ರುವ ವಿಷಯಗಳನ್ನು ಅರಿಯುವಲ್ಲಿ ವಿಫಲನಾಗುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ ಎಂದರು.

ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಅವರು ಮಾತನಾಡಿ, ಪ್ರಸ್ತುತ ದಿನ ಗಳಲ್ಲಿ ಮಾತು, ಕೃತಿಗಳಿಗೆ ಹೋಲಿಕೆ ಯಿಲ್ಲದ ಉದಾಹರಣೆಗಳೇ ಹೆಚ್ಚಾ ಗಿವೆ. ಸಮಾಜದಲ್ಲಿ ಹೊಂದಾಣಿಕೆ, ಸೌಹಾರ್ದತೆಯ ಕೊರತೆ ಎದ್ದು ಕಾಣುತ್ತಿದೆ. ಎಲ್ಲೆಲ್ಲೂ ಮೋಸ, ವಂಚ ನೆಗಳು ಮುಂಚೂಣಿಯ ಲ್ಲಿವೆಯೆಂದರು.



ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಪ್ರಗತಿಪರ ಕೃಷಿಕ ಎಂ.ಸಿ.ರಂಗಸ್ವಾಮಿ, ಗುಂಡುರಾಜು ಹಾಗು ಮಠದ ಸೇವಾ ಕಾರ್ಯಗಳಲ್ಲಿ ತೊಡಗಿರುವ ಹಲವ ರನ್ನು ಸ್ವಾಮೀಜಿ ಸನ್ಮಾನಿಸಿ ಆಶೀರ್ ವದಿಸಿದರು. ಹಾಸನ ಆದಿಚುಂಚನ ಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಭೆಗೂ ಮೊದಲು ಬೊಮ್ಮನಹಳ್ಳಿಗೆ ಆಗಮಿಸಿದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಮುತ್ತಿನ ಪಲ್ಲಕ್ಕಿಯಲ್ಲಿ ಕರೆತರಲಾಯಿತು.

ಕಬ್ಬಳಿ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ, ಬಸವಲಿಂಗ ಸ್ವಾಮೀಜಿ, ಬಸವರಾಜೇಂದ್ರ ಸ್ವಾಮೀಜಿ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಹೊನ್ನವಳ್ಳಿ ಸತೀಶ್, ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕಬ್ಬಳಿಗೆರೆ ಸೋಮಶೇಖರ್, ಪ್ರೊ.ಕೃಷ್ಣೇಗೌಡ, ಹಾರಂಗಿ ಮಹಾಮಂಡಳದ ಅಧ್ಯಕ್ಷ ಎಸ್.ಸಿ.ಚೌಡೇಗೌಡ, ಮುಖಂಡ ಜಿ.ಜೆ .ಅಪ್ಪಣ್ಣ, ಪ್ರಾಂಶುಪಾಲ ಮಹೇಶ್, ಕೋಡಿಗೌಡ, ಚನ್ನರಾಜೇಗೌಡ, ಮಾಧವ, ಅಣ್ಣೇಗೌಡ, ಕೇಶವೇಗೌಡ, ವಿವಿಧ ಗ್ರಾಮಗಳ ಮುಖಂಡರು ಹಾಗು ಭಕ್ತರು ಇದ್ದರು.

## ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಮುನ್ನೆಚ್ಚರಿಕೆ ವಹಿಸಿ



• ಪ್ರಜೋದಯ ವರದಿ

**ಹಾಸನ:** ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸಂಬಂಧ ಸಂಸದ ಶ್ರೇಯಸ್ ಪಟೇಲ್ ಅವರು ಶನಿವಾರ ಶಿಕ್ಷಣ ಇಲಾಖೆ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಮಾ.18 ರಿಂದ ಪರೀಕ್ಷೆ ನಡೆಯಲಿದ್ದು, ಜಿಲ್ಲಾದ್ಯಂತ 78 ಪರೀಕ್ಷಾ ಕೇಂದ್ರ ತೆರೆಯಲಾಗಿದೆ. ಈ ಬಾರಿ 19,097 ವಿದ್ಯಾರ್ಥಿಗಳು ಪರೀಕ್ಷೆ ಬರೆಯ ಲಿದ್ದಾರೆ. ಮಕ್ಕಳಿಗೆ ಯಾವುದೇ ತೊಂದರೆ ಆಗದಂತೆ ಮುನ್ನೆಚ್ಚರಿಕೆ ವಹಿಸ ಬೇಕೆಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಸಾರಿಗೆ ವ್ಯವಸ್ಥೆ ಸಮ ರ್ಪಕವಾಗಿ ಇರುವಂತೆ ನೋಡಿಕೊಳ್ಳ ಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಕುಡಿ ಯುವ ನೀರು, ಬೆಳಕಿನ ವ್ಯವಸ್ಥೆ ಚೆನ್ನಾಗಿರಬೇಕು. ಏನೇ ಸಮಸ್ಯೆಯಾ ದರೂ ತುರ್ತು ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನ ನೀಡಿದರು. ಪರೀಕ್ಷಾ ಕೇಂದ್ರದ ಸುತ್ತ ಬಿಗಿ ಬಂದೋಬಸ್ತ್ ಕೈಗೊಳ್ಳಬೇಕು. ಯಾವುದೇ ಲೋಪವಾ ಗದಂತೆ ಎಚ್ಚರ ವಹಿಸಬೇಕೆಂದರು.

### ಸ್ಥಳಕ್ಕೆ ತಹಶೀಲ್ದಾರ್ ಭೇಟಿ: ವಾಣಿಜ್ಯ ಸಿಲಿಂಡರ್ ಅಭಾವ ನಿವಾರಣೆ

## ಚನ್ನಕೇಶವಸ್ವಾಮಿ ದೇವಾಲಯದಲ್ಲಿ ದಾಸೋಹ ಪುನಾರಂಭ

• ಪ್ರಜೋದಯ ವರದಿ

**ಬೇಲೂರು:** ಸಿಲಿಂಡರ್ ಕೊರತೆಯಿಂದ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ಚನ್ನ ಕೇಶವಸ್ವಾಮಿ ದೇವಾಲಯ ದಾಸೋಹ ವ್ಯವಸ್ಥೆ ಪುನಾರಂಭವಾಗಿದೆ.

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮದಿಂದ ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳ ಅಭಾವ ಉಂಟಾಗಿ, ದೇವಾಲಯದಲ್ಲಿ ನಡೆಯು ತ್ತಿದ್ದ ದಾಸೋಹ ಸೇವೆಯನ್ನು ಸ್ಥಗಿತಗೊಳಿ ಸಲಾಗಿತ್ತು. ಇದು ತಾಲ್ಲೂಕು ಆಡಳಿತದ ಗಮನಕ್ಕೆ ಬರುತ್ತಿದ್ದಂತೆ ದಾಸೋಹ ಭವನಕ್ಕೆ ಭೇಟಿ ನೀಡಿದ ತಹಶೀಲ್ದಾರ್, ಸಮಸ್ಯೆ ಸರಿಪಡಿಸಿ ದಾಸೋಹ ಪುನಾರಂಭಕ್ಕೆ ವ್ಯವಸ್ಥೆ ಮಾಡಿದರು.

ಈ ವೇಳೆ ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರು ಮಾತನಾಡಿ, ಮುದ್ರಣ ಹಾಗು ವಿದ್ಯುನ್ಮಾನ ಮಾಧ್ಯ ಮಗಳ ಮೂಲಕ ವಾಣಿಜ್ಯ ಸಿಲಿಂಡರ್ ಇಲ್ಲದೆ ದಾಸೋಹ ಸ್ಥಗಿತಗೊಂಡಿದೆ ಎಂಬ ವಿಚಾರ ತಿಳಿಯಿತು. ತಾಲ್ಲೂಕು ಆಡಳಿತ ದಿಢೀರ್ ಎಚ್ಚೆತ್ತುಕೊಂಡು ಶನಿವಾರದಿಂದ ಭಕ್ತಾದಿಗಳಿಗೆ ಪ್ರಸಾದ ವಿತರಣೆಯಲ್ಲಿ ಯಾವುದೇ ತೊಂದರೆ ಆಗದಂತೆ ಸಿಲಿಂಡರ್ ವ್ಯವಸ್ಥೆ ಮಾಡಲಾಗಿದೆ ಎಂದರು.



ಇದುವರೆಗೂ ದಾಸೋಹ ವಿತರಣೆ ಯಲ್ಲಿ ಸಮಸ್ಯೆ ಕಂಡು ಬಂದಿರಲಿಲ್ಲ. ಕೊರೊನಾ ಸಂದರ್ಭದಲ್ಲಿ ಕೂಡ ನಡೆಸಿ ಕೊಂಡು ಬಂದಿದ್ದಾರೆ. ಈಗ ಸಿಲಿಂಡರ್ ಸಮಸ್ಯೆ ಬಂದಿದೆ ಅದರ ಸಮಸ್ಯೆ ಸರಿಪಡಿಸಲಾಗಿದೆ ಮುಂದೆ ನಿರಂತರವಾಗಿ ದಾಸೋಹ ಪ್ರಾರಂಭವಾಗಲಿದೆ. ಜಾತ್ರಾ ಸಮಯ ಹತ್ತಿರ ಇರುವುದರಿಂದ ಸಮಸ್ಯೆ ಬಗೆಹರಿಸಲಾಗುವುದು ಎಂದರ ಲ್ಲದೆ, ಇಂದಿನಿಂದ 20 ಸಿಲಿಂಡರ್‌ಗಳನ್ನು ತುರ್ತಾಗಿ ದಾಸೋಹ ಭವನಕ್ಕೆ ಕಳುಹಿಸ ಲಾಗುವುದೆಂದು ಹೇಳಿದರು.

ದಾಸೋಹ ವ್ಯವಸ್ಥೆ ನಿಂತಿರುವ ವಿಷಯ ನಮ್ಮ ಗಮನಕ್ಕೆ ಬಂದ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗಿದೆ. ಪ್ರತಿದಿನ ಸಾವಿ ರಾರು ಭಕ್ತರು ಹಾಗು ಪ್ರವಾಸಿಗರು ದೇವಾಲಯಕ್ಕೆ ಆಗಮಿಸುವ ಹಿನ್ನಲೆ ದಾಸೋಹ ವ್ಯವಸ್ಥೆ ಬಹಳ ಮಹತ್ವ ದ್ದಾಗಿದೆ. ಭಕ್ತರು ದೂರದೂರಿನಿಂದ ಆಗಮಿಸುವುದರಿಂದ ಅವರಿಗೆ ಆಹಾರ ವ್ಯವಸ್ಥೆ ಕಲ್ಪಿಸುವುದು ಅತ್ಯಗತ್ಯವಾಗಿದ್ದು, ಅದರಲ್ಲಿ ಯಾವುದೇ ವ್ಯತ್ಯಯ ಉಂಟಾ ಗಬಾರದೆಂಬುದು ನಮ್ಮ ಉದ್ದೇಶ ವಾಗಿದೆ ಎಂದರು.

ಅಗತ್ಯ ಪ್ರಮಾಣದ ಗ್ಯಾಸ್ ಸಿಲಿಂಡರ್ ಗಳು ನಿರಂತರವಾಗಿ ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಇದಲ್ಲದೆ ದೇವಾ ಲಯದ ಅಡುಗೆ ಮನೆಗೆ ಸಂಬಂಧಿಸಿದ ಬಾಯ್ಲರ್ ಹಾಗು ಇತರೆ ಸೌಲಭ್ಯಗಳ ದುರಸ್ತಿ ಕಾರ್ಯಗಳ ಕುರಿತು ಸಹ ದೇವಾ ಲಯದ ಆಡಳಿತ ಮಂಡಳಿಯೊಂದಿಗೆ ಮಾತುಕತೆ ನಡೆಸಲಾಗಿದೆ. ಭಕ್ತರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ತಾತ್ಕಾಲಿಕವಾಗಿ ಸೌದೆ ಒಲೆ ವ್ಯವಸ್ಥೆ ಯನ್ನೂ ಮಾಡಲಾಗಿದೆ. ಇಂದಿನಿಂದಲೇ ದಾಸೋಹ ವ್ಯವಸ್ಥೆಯನ್ನು ಪುನರಾರಂಭಿ ಸಲು ಕ್ರಮ ಕೈಗೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ಇಂತಹ ಸಮಸ್ಯೆಗಳು ಉಂಟಾ ಗದಂತೆ ತಾಲ್ಲೂಕು ಆಡಳಿತ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆಂದು ತಿಳಿಸಿದರು.

ತಾಲ್ಲೂಕು ಆಡಳಿತಾಧಿಕಾರಿ ಯೋಗೇಶ್, ದಾಸೋಹ ಅಡುಗೆ ನಿರ್ವಾಹಕ ಸುಬ್ಬಣ್ಣ, ಸುಧಾಕರ್ ಇದ್ದರು.

## ಕೊನೆಗೂ 66 ಪೈಸೆ ಹಿಂದಿರುಗಿಸಿದ ಕೆನರಾ ಬ್ಯಾಂಕ್

• ಪ್ರಜೋದಯ ವರದಿ



**ಸಕಲೇಶಪುರ:** ವ್ಯಕ್ತಿಯೊಬ್ಬರು ತನ್ನ 66 ಪೈಸೆಗಾಗಿ ಒತ್ತಾಯ ಮಾಡಿದ್ದ ರಿಂದ ಬ್ಯಾಂಕ್ ಕೊನೆಗೂ ಅವರ ಖಾತೆಗೆ ಜಮೆ ಮಾಡುವ ಮೂಲಕ ಸಮಸ್ಯೆಗೆ ಇತ್ಯರ್ಥ ಹಾಡಿದೆ.

ಹೊಸಕೊಪ್ಪಲು ಗ್ರಾಮದ ಬೆಳೆಗಾರ ಚೊಕ್ಕಣ್ಣಗೌಡ ಅವರು ಹಲವು ವರ್ಷಗಳ ಹಿಂದೆ ಕೆನರಾ ಬ್ಯಾಂಕ್‌ನಿಂದ ಸುಮಾರು 50 ಸಾವಿರ ರೂ. ಕೃಷಿ ಸಾಲ ಪಡೆದಿದ್ದರು. ಬಳಿಕ ಅವರು ಬಡ್ಡಿ ಸಮೇತ ಸಂಪೂರ್ಣ ಸಾಲವನ್ನು ತೀರಿಸಿದ್ದರೂ, ಬ್ಯಾಂಕ್ ದಾಖಲೆಯ ಪ್ರಕಾರ 9 ರೂಪಾಯಿ 34 ಪೈಸೆ ಬಾಕಿ ಇದೆ ಎಂದು ತಿಳಿದುಬಂದಿತ್ತು.

ಈ ಹಿನ್ನಲೆಯಲ್ಲಿ ಫೆ.25ರಂದು ಬ್ಯಾಂಕ್ ಸಿಬ್ಬಂದಿ ಚೊಕ್ಕಣ್ಣಗೌಡ ಅವರಿಗೆ ಕರೆ ಮಾಡಿ 9 ರೂಪಾಯಿ 34 ಪೈಸೆ ಸಾಲ ಬಾಕಿ ಇರುವುದಾಗಿ ತಿಳಿಸಿ ಅದನ್ನು ಪಾವತಿಸುವಂತೆ ಸೂಚಿಸಿದ್ದರು. ಅದರಂತೆ ಫೆ.26ರಂದು ಸಕಲೇಶಪುರ ಪಟ್ಟಣದ ಕೆನರಾ ಬ್ಯಾಂಕ್ ಶಾಖೆಗೆ ಭೇಟಿ ನೀಡಿ 10 ರೂಪಾಯಿ ನೀಡಿ ಸಾಲವನ್ನು ಕ್ಲಿಯರ್ ಮಾಡಿದರು.

ಬ್ಯಾಂಕ್ ಸಿಬ್ಬಂದಿ ನೀಡಿದ ರಸೀದಿಯಲ್ಲಿ 9 ರೂಪಾಯಿ 34 ಪೈಸೆ ಮಾತ್ರ ಉಲ್ಲೇಖವಾಗಿ ದ್ದರಿಂದ ಉಳಿದ 66 ಪೈಸೆ ಹಣವನ್ನು ವಾಪಾಸ್ ನೀಡುವಂತೆ ರೈತ ಚೊಕ್ಕಣ್ಣಗೌಡ ಪಟ್ಟು ಹಿಡಿದರು. ಈ ವಿಚಾರ ಮೇಲಧಿಕಾರಿಗಳ ಗಮನಕ್ಕೆ ಬಂದ ಬಳಿಕ ಬ್ಯಾಂಕ್ ಅಧಿಕಾರಿಗಳು ಅವರ ಖಾತೆಗೆ 66 ಪೈಸೆ ಜಮೆ ಮಾಡಿದ್ದು, ಮೊಬೈಲ್‌ಗೆ ಸಂದೇಶ ಬಂದಿದೆ.

## ಪಟ್ಲ ಬೆಟ್ಟದಲ್ಲಿ ಚಾರಣ ನಿಷೇಧ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಪ್ರಮುಖ ಚಾರಣ ತಾಣವಾದ ಪಟ್ಲ ಬೆಟ್ಟದಲ್ಲಿ ನಾಲ್ಕು ದಿನಗಳಿಂದ 10 ಕಾಡಾನೆಗಳ ಗುಂಪು ಬೀಡು ಬಿಟ್ಟಿರುವ ಹಿನ್ನಲೆ ಸಾರ್ವಜನಿಕರ ಹಾಗು ಪ್ರವಾಸಿಗರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ತಾತ್ಕಾಲಿಕವಾಗಿ ಪ್ರವೇಶ ವನ್ನು ನಿಷೇಧಿಸಲಾಗಿದೆ ಎಂದು ಯಸಳೂರು ವಲಯಾ ರಣ್ಯಾಧಿಕಾರಿ ತಿಳಿಸಿದ್ದಾರೆ.

ಕಾಡಾನೆಗಳ ಸಂಚಾರ ಹೆಚ್ಚಿರುವುದರಿಂದ ಯಾವುದೇ ಅನಾಹುತ ಸಂಭವಿಸದಂತೆ ಮುನ್ನೆ ಚ್ಚರಿಕಾ ಕ್ರಮವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಸಾರ್ವಜನಿಕರು ಹಾಗು ಚಾರಣ ಪ್ರಿಯರು ನಿಷೇಧಾ ವಧಿಯಲ್ಲಿ ಪಟ್ಲಬೆಟ್ಟದ ಕಡೆಗೆ ತೆರಳಬಾರದು ಎಂದು ಮನವಿ ಮಾಡಲಾಗಿದೆ. ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳದಲ್ಲಿ ನಿರಂತರ ನಿಗಾವಹಿಸಿದ್ದು, ಪರಿಸ್ಥಿತಿ ಸಾಮಾನ್ಯಗೊಂಡ ಬಳಿಕ ಪ್ರವೇಶಕ್ಕೆ ಅನುಮತಿ ನೀಡಲಾಗುವುದು ಎಂದು ತಿಳಿಸಲಾಗಿದೆ.

## ಮೈಕ್ರೋ ಫೈನಾನ್ಸ್ ಭೀತಿ: ಮಹಿಳೆಯರಿಗೆ ಸಂಕಷ್ಟ

### ಸರ್ಕಾರವೇ ಸಾಲಸೌಲಭ್ಯ ಒದಗಿಸುವಂತೆ ಜನವಾದಿ ಮಹಿಳಾ ಸಂಘಟನೆ ದೇವಿ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಮಹಿಳೆಯರ ಆರ್ಥಿಕ ಸಬಲೀಕರಣದ ಹೆಸರಿನಲ್ಲಿ ಹುಟ್ಟಿಕೊಂಡ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಇಂದು ಮಹಿಳೆಯರನ್ನು ಸುಲಿಗೆ ಮಾಡುತ್ತಿವೆ. ಸಾಲದ ಬಾಧೆ ತಾಳ ಲಾರದೆ ಹೆಣ್ಣುಮಕ್ಕಳು ಆತ್ಮಹತ್ಯೆಗೆ ಶರಣಾ ಗುವಂತಹ ಕಠಿಣ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ ಅವರು ಹೇಳಿದರು.

ನಗರದ ಸಿಐಟಿಯು ಕಚೇರಿ ಶ್ರಮದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಗಳು ಬ್ಯಾಂಕ್ ಮೂಲಕ ನೇರವಾಗಿ ಸಾಲ ನೀಡುವುದನ್ನು ನಿಲ್ಲಿಸಿ, ಮಹಿಳೆಯ ರನ್ನು ಈ ಖಾಸಗಿ ಫೈನಾನ್ಸ್ ಸಂಸ್ಥೆಗಳ ಪಾಶಕ್ಕೆ ತಳ್ಳಿವೆ. ಕೇವಲ ಬಡ್ಡಿ ಕಟ್ಟುವುದಕ್ಕಾಗಿಯೇ ಮಹಿಳೆಯರು ಬೀದಿ ಬೀದಿಗಳಲ್ಲಿ ಅಲೆಯುವಂತಾಗಿದೆಂದು ವಿಷಾದಿಸಿದರು.




ಶಾಸಕರು, ಸಂಸದರು ಕೇವಲ ಐದು ನಿಮಿಷಗಳಲ್ಲಿ ತಮ್ಮ ವೇತನವನ್ನು ಲಕ್ಷಾಂತರ ರೂಪಾಯಿಗೆ ಹೆಚ್ಚಿಸಿ ಕೊಳ್ಳುತ್ತಾರೆ. ಮಹಿಳೆಯರ, ಅಂಗನವಾಡಿ, ಆಶಾ ಹಾಗು

» 2ನೇ ಪುಟದಲ್ಲಿ

**ನೂತನ ಜಿಲ್ಲಾ ಸಂಚಾಲನಾ ಸಮಿತಿ ರಚನೆ**

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ನೂತನ ಜಿಲ್ಲಾ ಸಂಚಾಲನಾ ಸಮಿತಿ ರಚನೆ ಮಾಡಲಾಯಿತು. ಸಂಚಾಲಕರಾಗಿ ಮಮತಾ ಶಿವು, ಸಹ ಸಂಚಾಲಕರಾಗಿ ಪುಷ್ಪ ಹಾಸನ, ಶೈಲಜಾ ಹೊಳೆನರಸೀಪುರ, ಅರ್ಚನಾ ಸಕಲೇಶ ಪುರ, ಜ್ಯೋತಿ ಹಾಸನ, ನಂದಿನಿ ಚನ್ನರಾ ಯಪಟ್ಟಣ, ಮಂಜುಳಾ ಬೇಲೂರು, ಜಯಲಕ್ಷ್ಮಿ ಹಾಸನ, ಸೌಮ್ಯ ಸಕಲೇಶಪುರ ಅವರನ್ನು ನೇಮಕ ಮಾಡಲಾಯಿತು.


## ಯುದ್ಧ ಭೀತಿ: ಸಿಲಿಂಡರ್ ಬುಕ್ ಮಾಡಲು ಸರತಿ ಸಾಲು

• ಪ್ರಜೋದಯ ವರದಿ

**ಸಕಲೇಶಪುರ:** ಮಧ್ಯಪ್ರಾಚ್ಯದಲ್ಲಿ ಇರಾನ್ ಮತ್ತು ಇಸ್ರೇಲ್ ನಡುವೆ ನಡೆಯುತ್ತಿರುವ ಯುದ್ಧ ಬಿಕ್ಕಟ್ಟಿನ ಹಿನ್ನಲೆ ಗೃಹಬಳಕೆಯ ಗ್ಯಾಸ್ ಸಿಲಿಂಡರ್ ಗಳ ಲಭ್ಯತೆ ಬಗ್ಗೆ ಆತಂಕ ಹೆಚ್ಚಾಗಿದ್ದು, ಪಟ್ಟಣದಲ್ಲಿ ಸಿಲಿಂಡರ್ ಬುಕ್ ಮಾಡಲು ಜನರು ಸಾಲುಗಟ್ಟಿ ನಿಲ್ಲುವಂತಾಗಿದೆ.

ಪಟ್ಟಣದ ಸಿದ್ಧಿ ವಿನಾಯಕ ಗ್ಯಾಸ್ ಏಜೆನ್ಸಿ ಎದುರು ಶನಿವಾರ ಬೆಳಿಗ್ಗೆಯಿಂದಲೇ ನೂರಾರು ಮಂದಿ ಗ್ಯಾಸ್ ಬುಕ್ಕಿಂಗ್ ಹಾಗು ಸಿಲಿಂಡರ್ ಪಡೆ ಯಲು ಮುಗಿಬಿದ್ದರು. ತಾಲ್ಲೂಕಿನ ವಿವಿಧ ಗ್ರಾಮ ಗಳಿಂದಲೂ ಜನರು ಆಗಮಿಸಿದ್ದರು. ಸುಡುವ ಬಿಸಿಲನ್ನು ಲೆಕ್ಕಿಸದೆ ಗಂಟೆಗಟ್ಟಲೇ ಸರತಿ ಸಾಲಿನಲ್ಲಿ ನಿಲ್ಲಬೇಕಾಯಿತು.

ಅದರ ನಡುವೆ ಸರ್ವರ್ ಸಮಸ್ಯೆ ಉಂಟಾಗಿರು ವುದರಿಂದ ಗ್ಯಾಸ್ ಬುಕ್ಕಿಂಗ್ ಪ್ರಕ್ರಿಯೆ ನಿಧಾನವಾ ಗಿದ್ದು, ಜನರು ತೊಂದರೆ ಅನುಭವಿಸುವಂತಾಗಿದೆ. ಆನ್‌ಲೈನ್ ಮೂಲಕ ಬುಕ್ ಆಗದ ಹಿನ್ನಲೆಯಲ್ಲಿ ಹಲವರು ನೇರವಾಗಿ ಗ್ಯಾಸ್ ಏಜೆನ್ಸಿಗೆ ಆಗಮಿಸಿ ಸಿಲಿಂಡರ್ ಬುಕ್ ಮಾಡಲು ಪ್ರಯತ್ನಿಸುತ್ತಿದ್ದಾರೆ.



ಸರ್ವರ್ ಸಮಸ್ಯೆಯಿಂದ ಗ್ಯಾಸ್ ಬುಕ್ ಮಾಡ ಲಾಗದೆ ಜನರು ಪರದಾಡುತ್ತಿರುವ ದೃಶ್ಯ ಸ್ಥಳದಲ್ಲಿ ಕಂಡುಬಂದಿದ್ದು, ಸಮಸ್ಯೆ ಶೀಘ್ರ ಪರಿಹರಿಸ ಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## ರಾಹುಲ್ ಗಾಂಧಿ ವರ್ತನೆ ವಿರುದ್ಧ ಬಿಜೆಪಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಇರಾನ್-ಇಸ್ರೇಲ್ ಯುದ್ಧದ ಪರಿಣಾಮ ಆಮದಾಗುವ ಕಚ್ಚಾ ತೈಲ ಕಡಿತಗೊಂಡು ದೇಶದ ಪರಿಸ್ಥಿತಿ ಗಂಭೀರವಾಗಿರುವ ಸಂದರ್ಭದಲ್ಲಿ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಲಘುವಾಗಿ ನಡೆದುಕೊಳ್ಳುತ್ತಿರು ವುದನ್ನು ಖಂಡಿಸಿ ಬಿಜೆಪಿ ಕಾರ್ಯ ಕರ್ತರು ಶನಿವಾರ ನಗರದ ಕಾಂಗ್ರೆಸ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ರಾಹುಲ್ ಗಾಂಧಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿ ಸಿದ ಕಾರ್ಯಕರ್ತರು, ಯುದ್ಧ ದಿಂದಾಗಿ ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲ ಹಾಗು ಇಂಧನ ಸರಬರಾಜಿಗೆ ಅಡೆ ತಡೆ ಉಂಟಾಗಿದೆ. ದೇಶದ ಆರ್ಥಿಕ ಪರಿಸ್ಥಿತಿ ಹಾಗು ಇಂಧನ ಪೂರೈಕೆ ಕುರಿತು ಗಂಭೀರ ಚರ್ಚೆ ನಡೆ ಯುತ್ತಿವೆ. ಈ ವೇಳೆ ಪ್ರತಿಪಕ್ಷ ನಾಯ ಕರು ಜವಾಬ್ದಾರಿಯುತವಾಗಿ ನಡೆದು ಕೊಳ್ಳಬೇಕು. ಆದರೆ ಅವರ ವರ್ತನೆ ಖಂಡನಾರ್ಹ ಎಂದರು.



ಬಿಜೆಪಿ ನಗರಾಧ್ಯಕ್ಷ ಯೋಗೀಶ್ ಗೌಡ ಮಾತನಾಡಿ, ಯುದ್ಧದಿಂದಾಗಿ ಕಚ್ಚಾ ತೈಲಕ್ಕೆ ಪರದಾಡುವಂತಾಗಿದೆ. ಕೇಂದ್ರ ಸರ್ಕಾರ ದೇಶದಲ್ಲಿ ಅಡುಗೆ ಅನಿಲ ಸೇರಿ ಅಗತ್ಯ ವಸ್ತುಗಳ ಪೂರೈಕೆ ಯಲ್ಲಿ ಕೊರತೆ ಆಗದಂತೆ ಕ್ರಮ ಕೈಗೊಂಡಿದೆ. ಕೇಂದ್ರ ಸರ್ಕಾರ ಸಮ ರ್ಪಕ ಕ್ರಮ ಕೈಗೊಂಡಿರುವುದರಿಂದ ಸಾಮಾನ್ಯ ಜನರಿಗೆ ಹೆಚ್ಚಿನ ತೊಂದರೆ ಆಗದಂತೆ ವ್ಯವಸ್ಥೆ ಮಾಡಲಾಗಿದೆ. ಆದರೂ ಇಂತಹ ಸಮಯದಲ್ಲಿ ರಾಹುಲ್‌ಗಾಂಧಿ ಅವರು ರಾಷ್ಟ್ರದ ಪರಿಸ್ಥಿತಿ ಬಗ್ಗೆ ಗಂಭೀರವಾಗಿ ಚಿಂತಿಸುವ ಬದಲು ತಮ್ಮ ಸಂಸದರೊಂದಿಗೆ ರಾಜಕೀಯ ಚರ್ಚೆಗಳಲ್ಲಿ ಕಾಲ ಕಳೆ ಯುತ್ತಿದ್ದಾರೆಂದು ಆರೋಪಿಸಿದರು.

ದೇಶದ ಸಂಕಷ್ಟದ ಸಂದರ್ಭಗಳಲ್ಲಿ ಪ್ರತಿಪಕ್ಷಗಳು ಸರ್ಕಾರದ ವಿರುದ್ಧ ರಾಜಕೀಯ ಆರೋಪ ಮಾಡುವುದ ಕ್ಕಿಂತ ರಾಷ್ಟ್ರದ ಹಿತದೃಷ್ಟಿಯಿಂದ ಸಹ ಕಾರ ನೀಡಬೇಕು. ಎಲ್ಲಾ ವಿಚಾರ ಗಳಲ್ಲೂ ಪ್ರತಿಪಕ್ಷ ನಾಯಕರು ಜವಾ ಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಅನಗತ್ಯ ಆರೋಪ ಹಾಗೂ ದೇಶದ ಹಿತಾಸಕ್ತಿಗೆ ಧಕ್ಕೆಯುಂಟು ಮಾಡುವ ಹೇಳಿಕೆ ನೀಡುವುದು ಸರಿಯಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಿರೀಶ್ ನಂಬಿಹಳ್ಳಿ, ಜಿಲ್ಲಾ ವಕ್ತಾರ ಮೋಹನ್ ಕುಮಾರ್, ಮಂಡಲ ಪ್ರಧಾನ ಕಾರ್ಯದರ್ಶಿ ರಾಜೀವ್, ವಿಶಾಲಾಕ್ಷಿ ಮೊದಲಾದವರಿದ್ದರು.

### ಎಂಸಿಇ ಆಡಳಿತ ಮಂಡಳಿ ಕಾರ್ಯದರ್ಶಿ ಜಗದೀಶ್ ಹೇಳಿಕೆ | ಮಕ್ಕಳಿಗೆ ಕೌಶಲ ತರಬೇತಿ

## ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಹತ್ತು ಹಲವು ಕ್ರಮ

• ಪ್ರಜೋದಯ ವರದಿ

**ಹಾಸನ:** ವಿದ್ಯಾರ್ಥಿಗಳ ಶೈಕ್ಷಣಿಕ ಹಾಗು ವ್ಯಕ್ತಿತ್ವ ವಿಕಸನ ಉದ್ದೇಶದಿಂದ ಹಲವಾರು ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದು ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಜಗದೀಶ್ ಚೌಡುವಳ್ಳಿ ಅವರು ಹೇಳಿದರು.

ಮಲೆನಾಡು ಇಂಜಿನೀಯರಿಂಗ್ ಕಾಲೇಜಿ ನಲ್ಲಿ ಶನಿವಾರ ಏರ್ಪಡಿಸಿದ್ದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಕೌಶಲ ತರಬೇತಿ ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾಲೇಜು ದೇಶಾದ್ಯಂತ ಉತ್ತಮ ಹೆಸರು ಪಡೆದಿದೆ. ಇಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನ ಒಳಗೊಂಡಂತೆ ನುರಿತ ಉಪನ್ಯಾಸಕರು ಇದ್ದಾರೆ. ಜೊತೆಗೆ ವಿದ್ಯಾರ್ಥಿ ಗಳಿಗೆ ಹಲವಾರು ವಿಷಯಗಳನ್ನು ಮನದಟ್ಟು ಮಾಡಲು ವಿಷಯ ತಜ್ಞರನ್ನ ಕರೆಸಿ ಮಾರ್ಗ ದರ್ಶನ ನೀಡಲಾಗುತ್ತಿದೆ. ವಿಷಯವಾರು ಸಾಮಾಜಿಕ ಜ್ಞಾನ, ತಿಳಿವಳಿಕೆ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.



ವ್ಯಾಸಂಗ ಪೂರ್ಣಗೊಳಿಸುವ ವಿದ್ಯಾರ್ಥಿಗಳ ಉಜ್ವಲ ಭವಿಷ್ಯದ ದೃಷ್ಟಿಯಿಂದ ಪ್ರತಿಷ್ಠಿತ ಕಂಪನಿಗಳನ್ನು ಕರೆಸಿ ಉದ್ಯೋಗ ಕಲ್ಪಿಸಿಕೊಡ ಲಾಗುತ್ತಿದೆ. ಕ್ಯಾಂಪಸ್ ಸೆಲೆಕ್ಷನ್ ಮೂಲಕ ಅನೇಕ ವಿದ್ಯಾರ್ಥಿಗಳು ಬದುಕು ಕಟ್ಟಿಕೊಂಡಿ ದ್ದಾರೆ. ಮಕ್ಕಳಿಗೆ ಒಳ್ಳೆಯ ಬದುಕು ಕಟ್ಟಿ ಕೊಡು ವುದು ಸಂಸ್ಥೆಯ ಧ್ಯೇಯವೆಂದರು.

ಬೆಂಗಳೂರಿನ ಸಂವಾದ ಫೌಂಡೇಶನ್ ಟ್ರಸ್ಟ್ ನಿರ್ದೇಶಕ ರಾಧಾಕೃಷ್ಣ ಹೊಳ್ಳ ಅವರು ಮಾತ ನಾಡಿ, ವಿದ್ಯಾರ್ಥಿಗಳು ವ್ಯಾಸಂಗದ ಅವಧಿ ಯಲ್ಲಿ ಗಮನವಿಟ್ಟು ಪಾಠ ಕೇಳಬೇಕು. ಅಂಕ ಗಳಿಕೆಗಾಗಿ ಪಠ್ಯ ಪುಸ್ತಕ ಓದದೆ ಆಳವಾಗಿ ಅರಿತರೆ ನೆನಪಿನಲ್ಲಿ ಉಳಿಯುತ್ತದೆ. ಯುವ ಸಮು ದಾಯ ಪ್ರಗತಿಪರ ಚಿಂತನೆಯ ಹಾದಿಯಲ್ಲಿ ತೊಡಗಿಸಿಕೊಳ್ಳಬೇಕು. ಯುವಕರು ದೇಶದ ಅಭಿವೃದ್ಧಿಗೆ ತಮ್ಮ ಕೈಲಾದ ಸಹಾಯ ಮಾಡ ಬೇಕು. ನಮ್ಮ ಸಂಸ್ಕೃತಿ, ಆಚಾರ ವಿಚಾರ, ನಮ್ಮ ಧರ್ಮ ಜಾಗೃತಿಗೆ ದಾರಿದೀಪ ವಾಗಬೇಕೆಂದರು.

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಪ್ರಮುಖ್ ಎಂ.ಎನ್.ಕಾಂತರಾಜ್ ಅವರು ಮಾತನಾಡಿ, ದೇಶದ ಯಾವುದೇ ಮೂಲೆಯಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾದರೆ ಎಬಿವಿಪಿ ನೆರವಿಗೆ ನಿಲ್ಲುತ್ತದೆ. ಸರ್ಕಾರದ ಅವೈಜ್ಞಾನಿಕ ನಿರ್ಧಾರಗಳ ವಿರುದ್ಧ ಪ್ರಬಲ ಹೋರಾಟ ರೂಪಿಸಿ ಎಚ್ಚರಿಸುವ ಕೆಲಸ ಮಾಡುತ್ತದೆಂದರು.

ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ. ಇಂದ್ರ ಬಹೂದ್ದೂರು ಅವರು ಮಾತನಾಡಿ, ವಿದ್ಯಾರ್ಥಿಗಳ ಜೀವನ ಸುಗಮವಾಗಬೇಕಾದರೆ ಅವರಿಗೆ ಉತ್ತಮ ವಿದ್ಯಾಭ್ಯಾಸ ನೀಡಬೇಕು. ಜ್ಞಾನಾರ್ಜನೆಗೆ ಅಗತ್ಯ ಸಹಕಾರ ನೀಡಬೇಕು. ಆ ಕೆಲಸವನ್ನು ಮಲೆನಾಡು ತಾಂತ್ರಿಕಮಹಾ ವಿದ್ಯಾ ಲಯ ಅಚ್ಚುಕಟ್ಟಾಗಿ ಮಾಡುತ್ತಿದೆಯೆಂದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಮಾಧ್ಯಮ ಸಂಯೋಜಕ ಕಟ್ಟಾಯ ಶಿವಕುಮಾರ್ ಅವರು ಮಾತನಾಡಿ,

» 2ನೇ ಪುಟದಲ್ಲಿ

# ಉಪ ಚುನಾವಣೆ: ಗರಿಗೆದರಿದ ರಾಜಕೀಯ ಚಟುವಟಿಕೆ

## ವಾರದೊಳಗೆ ದಿನಾಂಕ ನಿಗದಿ ಸಾಧ್ಯತೆ | ಹೈಕಮಾಂಡ್ ನಿರ್ಧಾರ ಅಂತಿಮ ಎಂದ ಸಿಎಂ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ದಾವಣಗೆರೆ ದಕ್ಷಿಣ ಹಾಗು ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ವಾರದೊಳಗಾಗಿ ಉಪ ಚುನಾವಣೆ ದಿನಾಂಕ ಘೋಷಣೆಯಾಗುವ ಸಾಧ್ಯತೆಯಿದ್ದು ಬಿಜೆಪಿ ಹಾಗು ಕಾಂಗ್ರೆಸ್‌ನಲ್ಲಿ ಟಿಕೆಟ್ ಹಂಚಿಕೆ ಚರ್ಚೆ ಜೋರಾಗಿದೆ.

ಹೆಚ್.ವೈ.ಮೇಟಿ ಹಾಗು ಶಾಮನೂರು ಶಿವಶಂಕರಪ್ಪ ಅವರ ನಿಧನದ ಹಿನ್ನಲೆಯಲ್ಲಿ ಈ ಎರಡು ಕ್ಷೇತ್ರಗಳು ತೆರವಾಗಿವೆ. ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣಕ್ಕೆ ಟಿಕೆಟ್ ಫೈಟ್ ಜೋರಾಗಿದೆ. ಟಿಕೆಟ್ ವಿಚಾರವಾಗಿ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಪೈಪೋಟಿ ನಡೆಯುತ್ತಿದೆ. ದಾವಣಗೆರೆ ದಕ್ಷಿಣಕ್ಕೆ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕೆಂಬುದು ಕಾಂಗ್ರೆಸ್ ಮುಸ್ಲಿಂ ಮುಖಂಡರ ಬೇಡಿಕೆಯಾಗಿದೆ. ಅದಕ್ಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರ ವಿರೋಧವಿದೆ.

ಇನ್ನು ಬಿಜೆಪಿಯಲ್ಲೂ ಪೈಪೋಟಿ ಇದೆ. ಜಿ.ಎಸ್.ಸಿದ್ದೇಶ್ವರ ಮತ್ತು ಎಂ.ಪಿ.ರೇಣುಕಾಚಾರ್ಯ ಬಣಗಳ ನಡುವೆ ಟಿಕೆಟ್‌ಗಾಗಿ ಪೈಪೋಟಿ ಶುರುವಾಗಿದೆ. ಈ ಭಿನ್ನಮತದ ಹಿನ್ನಲೆಯಲ್ಲಿ ಪ್ರತ್ಯೇಕ ಸಭೆಗಳು ನಡೆದಿವೆ. ಭಿನ್ನಮತ ಶಮನ ಮಾಡುವ ನಿಟ್ಟಿನಲ್ಲಿ ಜಿಲ್ಲೆಗೆ ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್ ಅಗರವಾಲ್ ಭೇಟಿ ನೀಡಿ ಮಾತುಕತೆ ನಡೆಸಿದ್ದರು.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ, ಉಪ ಚುನಾವಣೆ ಒಂದು ವಾರದೊಳಗೆ ಘೋಷಣೆಯಾಗಬಹುದು ಎಂದರು. ಒಂದೇ ಕುಟುಂಬದಿಂದ ಎಷ್ಟು ಜನ ಕೇಳಿದರೂ ಒಬ್ಬರಿಗೆ ಹೈ ಕಮಾಂಡ್ ಟಿಕೆಟ್ ನೀಡುವುದು. ಉಪಚುನಾವಣೆಗೆ ಎಲ್ಲಾ ತಯಾರಿ ನಡೆದಿದ್ದು, ನಾವು ಸಿದ್ಧರಿದ್ದೇವೆಂದರು.

ಬಾಗಲಕೋಟೆ ಮತ್ತು ದಾವಣಗೆರೆ ಉಪ ಚುನಾವಣೆ ಅಭ್ಯರ್ಥಿಗಳ ಆಯ್ಕೆಯನ್ನು ಹೈಕಮಾಂಡ್ ಮಾಡುತ್ತದೆ. ಹೆಚ್.ವೈ. ಮೇಟಿ ಕುಟುಂಬದವರನ್ನೇ ಆಯ್ಕೆ ಮಾಡಲಾಗುವುದೇ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿ, ಅವರೂ ಆಕಾಂಕ್ಷಿ ಎಂದರು.

**ಟಿಕೆಟ್ ಫೈಟ್ ಜೋರು**

ದಾವಣಗೆರೆಯಲ್ಲಿ ಕಾಂಗ್ರೆಸ್‌ನಲ್ಲಿ ಶಾಮನೂರು ಕುಟುಂಬ ಮತ್ತು ಮುಸ್ಲಿಂ ನಾಯಕರ ನಡುವೆ ಹಗ್ಗಜಗ್ಗಾಟ ನಡೆಯುತ್ತಿದೆ. ಈ ಬಾರಿ ಟಿಕೆಟ್ ನಮಗೆ ಕೊಡಬೇಕು ಎಂದು ಮುಸ್ಲಿಂ ಆಕಾಂಕ್ಷಿಗಳು ಒತ್ತಾಯಿಸುತ್ತಿದ್ದಾರೆ. ಆದರೆ ಸಮರ್ಥ್ ಅವರನ್ನು ಕಣಕ್ಕಿಳಿಸುವುದು ಎಸ್.ಎಸ್.ಮಲ್ಲಿಕಾರ್ಜುನ ಅವರ ತಂತ್ರಗಾರಿಕೆಯಾಗಿದೆ. ಹೀಗಾಗಿ ಗೊಂದಲ ಸೃಷ್ಟಿಯಾಗಿದೆ. ಇನ್ನು ಬಿಜೆಪಿಯಲ್ಲೂ ಬಣ ಕಿತ್ತಾಟ ಜೋರಾಗಿದೆ. ಜಿಎಸ್ ಸಿದ್ದೇಶ್ವರ ಮತ್ತು ಎಂಪಿ ರೇಣುಕಾಚಾರ್ಯ ಬಣದ ನಡುವೆ ಪೈಪೋಟಿ ಇದೆ. ಈ ಭಿನ್ನಾಭಿಪ್ರಾಯ ಶಮನ ಮಾಡುವುದು ಕಮಲ ನಾಯಕರಿಗೆ ಸವಾಲಾಗಿದೆ. ಭಾನುವಾರ ಮತ್ತೊಂದು ಸುತ್ತಿನ ಸಭೆ ನಡೆಯಲಿದೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಶ್ರೀರಾಮುಲು, ಗೋವಿಂದ ಕಾರಜೋಳ ದಾವಣಗೆರೆಗೆ ತೆರಳಿ ಸಭೆ ನಡೆಸಲಿದ್ದಾರೆ.



### ಕಾಂಗ್ರೆಸ್‌ನಲ್ಲೂ ಪ್ರಮುಖರ ಸಭೆ

ದಾವಣಗೆರೆ ದಕ್ಷಿಣ ಕ್ಷೇತ್ರದ ಸಮನ್ವಯ ಸಮಿತಿ ಸಭೆಯನ್ನು ಕಾಂಗ್ರೆಸ್ ನಾಯಕರು ನಡೆಸಿದ್ದಾರೆ. ಪ್ರಮುಖ ಶಾಸಕರು, ಸಚಿವರು ಸಭೆಯಲ್ಲಿ ಭಾಗಿಯಾಗಿದ್ದರು. ಚುನಾವಣೆ ಹೇಗೆ ಮಾಡಬೇಕು ಎಂದು ಚರ್ಚೆ ಮಾಡಲಾಗಿದೆ. ಚುನಾವಣೆ ಗೆಲ್ಲುವ ನಿಟ್ಟಿನಲ್ಲಿ ರಣತಂತ್ರ ರೂಪಿ ಸಲಾಗಿದೆ. ಮಾರ್ಚ್ 24 ರಂದು ಮತ್ತೊಂದು ಸುತ್ತಿನ ಸಭೆ ನಡೆಸಲು ನಿರ್ಧಾರ ಮಾಡಲಾಗಿದೆ. ಈ ಸಭೆಯಲ್ಲಿ ದಾವಣಗೆರೆ ಜಿಲ್ಲಾ ಮುಖಂಡರು ಭಾಗಿಯಾಗಲಿದ್ದಾರೆ.

### ಕೋರ್ ಕಮಿಟಿ ಸಭೆಯಲ್ಲಿ ಚರ್ಚೆ

ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಬಗ್ಗೆ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಚರ್ಚೆ ನಡೆದಿದೆ. ಆಕಾಂಕ್ಷಿಗಳ ಕುರಿತು ಚರ್ಚೆ ಆಗಿದೆ. ಕೋರ್ ಕಮಿಟಿಯಲ್ಲಿ ಚರ್ಚಿಸಿದ ಹೆಸರುಗಳನ್ನು ಪಕ್ಷದ ವರಿಷ್ಠರಿಗೆ ಕಳುಹಿಸಿಕೊಡುತ್ತೇವೆಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ.
ಕರ್ನಾಟಕ ರಾಜ್ಯ ಉಸ್ತುವಾರಿ ಡಾ.ರಾಧಾಮೋಹನ್ ದಾಸ್ ಅಗರ್‌ವಾಲ್, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ವಿಪಕ್ಷ ನಾಯಕರು ಮತ್ತು ಎಲ್ಲಾ ಕೋರ್ ಕಮಿಟಿ ಸದಸ್ಯರು ಭಾಗವಹಿಸಿದ್ದರು. ಅಭ್ಯರ್ಥಿಗಳನ್ನು ಗೆಲ್ಲಿಸುವ ನಿಟ್ಟಿನಲ್ಲಿ ನಾವೆಲ್ಲ ಒಂದಾಗಿ, ಒಟ್ಟಾಗಿ ಪ್ರಯತ್ನ ಮಾಡ ಬೇಕು. ಸಂಪೂರ್ಣ ಶ್ರಮ ಹಾಕಬೇಕೆಂದು ಈ ಸಭೆಯಲ್ಲಿ ತೀರ್ಮಾನ ಆಗಿದೆ ಎಂದು ತಿಳಿಸಿದ್ದಾರೆ.

# ಮೈಕ್ರೋ ಫೈನಾನ್ಸ್ ಭೀತಿ: ಮಹಿಳೆಯರಿಗೆ ಸಂಕಷ್ಟ

» ಮೊದಲನೇ ಪುಟದಿಂದ

ಬಿಸಿಯೂಟ ನೌಕರರ ವೇತನ ಹೆಚ್ಚಿಸುವಂತೆ, ಸೌಲಭ್ಯ ನೀಡುವಂತೆ ವರ್ಷಾನುಗಟ್ಟಲೆ ಹೋರಾಡಿದರೂ ಸರ್ಕಾರಗಳು ಕ್ಯಾರೇ ಎನ್ನುತ್ತಿಲ್ಲ ಎಂದು ಕಿಡಿಕಾರಿದರು.

ಮಹಿಳೆಯರು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಮತ್ತು ಶೋಷಣೆಯ ವಿರುದ್ಧ ಸಿಡಿದೇಳಲು ಸಂಘಟಿತರಾಗಿ ಹೋರಾಡುವುದು ಅನಿವಾರ್ಯವಾಗಿದೆ. ಸ್ವತಂತ್ರ ಪೂರ್ವ ದಿಂದಲೂ ಮಹಿಳೆಯರು ಹೋರಾಟದ ಮೂಲಕವೇ ಮತದಾನದ ಹಕ್ಕು, ಶಿಕ್ಷಣದ ಹಕ್ಕು ಗಳನ್ನು ಪಡೆದುಕೊಂಡಿದ್ದಾರೆ. ಸಂಘಟನೆಯಿಲ್ಲದೆ ಹೋದರೆ ನಮಗೆ ಯಾವುದೇ ಹಕ್ಕುಗಳು ಸಿಗುವುದಿಲ್ಲ ಎಂದು ಎಚ್ಚರಿಸಿದರು.

ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರಗಳು ದಿನೇ ದಿನೇ ಹೆಚ್ಚುತ್ತಿವೆ. ಮಣಿಪುರ ದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ, ಕುಸ್ತಿಪಟುಗಳ ಮೇಲಿನ ದೌರ್ಜನ್ಯದಂತಹ ಘಟನೆಗಳು ವ್ಯವಸ್ಥೆಯ ಅಣಕವಾಗಿವೆ. ಮಹಿಳೆಯರು ಕೇವಲ ಟಿವಿ ಧಾರಾವಾಹಿಗಳಲ್ಲಿ ಬರುವ ಅತ್ತೆ-ಸೊಸೆ ಜಗಳವನ್ನು ನೋಡಿಕೊಂಡು ಕಾಲ ಹರಣ ಮಾಡಬಾರದು. ಕೇವಲ ದೇವಸ್ಥಾನಗಳಿಗೆ ಹೋಗಿ ಹರಕೆ ಹೊತ್ತರೆ, ಪ್ರಾರ್ಥಿಸಿದರೆ ನಮ್ಮ ಬದುಕು ಬದಲಾಗುವುದಿಲ್ಲ. ಮಹಿಳೆಯರು ವಾಸ್ತವವನ್ನು ಅರಿತು, ಹಕ್ಕುಗಳಿಗಾಗಿ ಬೀದಿಗಿಳಿದು ದನಿ ಎತ್ತಬೇಕೆಂದರು.

ಮಹಿಳೆಯರ ಅಭಿವೃದ್ಧಿಗಾಗಿ ಸರ್ಕಾರ ಗ್ರಾಮ ಪಂಚಾಯಿತಿ ಮಟ್ಟದಲ್ಲಿರುವ ಪ್ರತಿ ಮಹಿಳಾ ಒಕ್ಕೂಟಗಳಿಗೆ ಕನಿಷ್ಠ 1 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಬೇಕು. ಮಹಿಳೆಯರು ಉತ್ಪಾದಿಸುವ ವಸ್ತುಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಬೇಕು. ಅಗತ್ಯ ತರಬೇತಿ ಮತ್ತು ಕೆಲಸ ಮಾಡಲು ಶೆಡ್‌ಗಳನ್ನು ನಿರ್ಮಿಸಿಕೊಡಬೇಕು. ಶೇ.4ರ ಬಡ್ಡಿ ದರದಲ್ಲಿ ಕನಿಷ್ಠ 10 ಲಕ್ಷ ರೂ. ವರೆಗೆ ದೀರ್ಘಾವಧಿ ಸಾಲ ಸೌಲಭ್ಯ ಒದಗಿಸಬೇಕೆಂದು ಒತ್ತಾಯಿಸಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಸಂಚಾಲಕಿ ಮಮತಾ ಶಿವು ಅವರು ಮಾತನಾಡಿ, ಮಹಿಳೆಯರು ಬದುಕನ್ನು ಸಮರ್ಥವಾಗಿ ಎದುರಿಸಬೇಕಾದರೆ ಶಿಕ್ಷಣ ಬಹಳ ಮುಖ್ಯ. ದೌರ್ಜನ್ಯದ ವಿರುದ್ಧ ಮಹಿಳೆಯರು ಜಾಗೃತರಾಗಿ ಸಂಘಟಿತ ಹೋರಾಟ ನಡೆಸಬೇಕು. ಮಹಿಳಾ ಸಂಕುಲಕ್ಕೆ ಯಾವುದೇ ಜಾತಿ, ಧರ್ಮದ ಬೇಧ-ಭಾವವಿಲ್ಲ. ಪುರುಷ ಪ್ರಧಾನ ಸಮಾಜ ನಮ್ಮನ್ನು ಇವುಗಳ ಆಧಾರದಲ್ಲಿ ಒಡೆಯುವ ಪ್ರಯತ್ನವನ್ನು ಮಾಡುತ್ತಿದೆ ಎಂದು ಆರೋಪಿಸಿದರು. ಮಹಿಳಾ ಮುಖಂಡರಾದ ಇಂದ್ರಮ್ಮ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ಜಯಲಕ್ಷ್ಮಿ, ಶೈಲಜಾ ಇದ್ದರು.

# ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಹತ್ತು ಹಲವು ಕ್ರಮ

» ಮೊದಲನೇ ಪುಟದಿಂದ

ವಿದ್ಯಾರ್ಥಿಗಳ ಅನುಕೂಲತೆಗಾಗಿ ಕಾಲೇಜಿನ ಆಡಳಿತ ಮಂಡಳಿ ಸಾಕಷ್ಟು ಬದಲಾವಣೆ ತಂದಿದೆ. ಕಾಲೇಜು ಕ್ಯಾಂಪಸ್ ಅಭಿವೃದ್ಧಿ ಮಾಡಿರುವ ಜೊತೆಗೆ ಅತ್ಯುತ್ತಮ ಉಪನ್ಯಾಸಕರ ನೇಮಕ ಮಾಡಿಕೊಳ್ಳಲಾಗಿದೆ. ಪರಿಣಾಮಕಾರಿ ಪಾಠ ಪ್ರವಚನಗಳನ್ನು ಕೊಡಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಹೆಚ್ಚಿನ ರೀತಿಯ ಸಹಕಾರ ನೀಡಿದೆ ಎಂದರು.

ಹದಿಹರೆಯದ ವಯಸ್ಸಿನಲ್ಲಿ ಮಕ್ಕಳು ಬೇರೆ ವಿಚಾರಗಳತ್ತ ಗಮನ ಹರಿಸದೆ ವ್ಯಾಸಂಗಕ್ಕೆ ಮಾತ್ರ ಆದ್ಯತೆ ನೀಡಬೇಕು. ಅತಿಯಾದ ಮೊಬೈಲ್ ಬಳಕೆ ಓದಿನ ಮೇಲೆ ದುಷ್ಪರಿಣಾಮ ಬೀರುತ್ತದೆ. ಸಾಮಾಜಿಕ ಜಾಲತಾಣಗಳನ್ನು ಅವಶ್ಯಕತೆಗೆ ತಕ್ಕಷ್ಟು ಮಾತ್ರ ಬಳಸಬೇಕು. ದುಶ್ಚಟ ಗಳ ದಾಸರಾಗದೆ ವ್ಯಾಸಂಗ, ವ್ಯಕ್ತಿತ್ವ ವಿಕಸನಕ್ಕೆ ಆದ್ಯತೆ ನೀಡಬೇಕು. ಆ ಮೂಲಕ ವಿದ್ಯಾ ಸಂಸ್ಥೆ ಹಾಗು ಪೋಷಕರಿಗೆ ಕೀರ್ತಿ ತರಬೇಕೆಂದು ಕಿವಿಮಾತು ಹೇಳಿದರು.

ಗಣಿತ ವಿಭಾಗದ ಮುಖ್ಯಸ್ಥೆ ಕಲಾವತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಯೋಜಕ ಪ್ರಾಧ್ಯಾಪಕ ಮೋಹನ್, ಕಾರ್ಯಕ್ರಮ ಸಂಯೋಜಕರಾದ ದೀಕ್ಷಿತ್, ಮೋಕ್ಷಿತಾ ಇತರರಿದ್ದರು. ಪ್ರಥಮ ವರ್ಷದ ಒಂದು ಸಾವಿರ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಬೇಲೂರಿಗೆ ಸೆಸ್ಕ್ ವಿಭಾಗ, ಹಳೇಬೀಡಿಗೆ ಉಪ ವಿಭಾಗ ಮಂಜೂರು

• ಪ್ರಜೋದಯ ವರದಿ

**ಹಳೇಬೀಡು:** ಸರ್ಕಾರಕ್ಕೆ ಮನವಿ ಸಲ್ಲಿಸಿ ಮುಖ್ಯಮಂತ್ರಿ ಹಾಗು ಇಂಧನ ಸಚಿವರೊಂದಿಗೆ ನಾವು ಮಾತುಕತೆ ನಡೆಸಿದ್ದರಿಂದ ಬೇಲೂರಿಗೆ ಸೆಸ್ಕ್ ವಿಭಾಗ, ಹಳೇಬೀಡಿಗೆ ಉಪ ವಿಭಾಗ ಮಂಜೂರಾಗಿದೆ ಎಂದು ಮಾಜಿ ಸಚಿವ ಬಿ.ಶಿವರಾಮ್ ಅವರು ಹೇಳಿದರು.

ಹಳೇಬೀಡಿನಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ವ್ಯವಸ್ಥಾಪಕ ನಿರ್ದೇಶಕರಿಂದ ಕಾರ್ಯಾರಂಭ ಪ್ರಕ್ರಿಯೆ ಕೈಗೊಳ್ಳಲು ಹಾಸನ ಮೇಲ್ವಿಚಾರಕ ಇಂಜಿನೀಯರ್‌ಗೆ ಆದೇಶ ಬಂದಿದೆಯೆಂದರು.

ಬೇಲೂರು ಉಪ ವಿಭಾಗದಲ್ಲಿ 4,591 ವಿವಿಧ ಸಾಮರ್ಥ್ಯದ ಪರಿವರ್ತಕ, 1636 ಕಿ.ಮೀ. ಹೆಚ್.ಟಿ. ವಿದ್ಯುತ್ ಮಾರ್ಗ, 3,130 ಕಿ.ಮೀ. ಎಲ್.ಟಿ. ಮಾರ್ಗ, 83,206 ವಿದ್ಯುತ್ ಮಾರ್ಗಗಳಿವೆ. ಹೊಸದಾಗಿಯೂ ಸ್ಥಾವರಗಳ ಸಂಖ್ಯೆ ಹೆಚ್ಚಾಗುತ್ತಿದೆ. ಹೀಗಾಗಿ ಬೇಲೂರಿನಲ್ಲಿ ವಿಭಾಗ ಕಚೇರಿ ಹಳೇಬೀಡಿನಲ್ಲಿ ಉಪ ವಿಭಾಗ ಕಚೇರಿ ಆರಂಭಿಸಲು ಅನುಮತಿ ದೊರಕಿದೆ. ದೂರದ ಮಲೆನಾಡಿನ ಸಕಲೇಶಪುರ ಕಚೇರಿಗೆ ಹಳೇಬೀಡು, ಮಾದಿಹಳ್ಳಿ ಹೋಬಳಿಯ ರೈತರು ಪರಿವರ್ತಕ ರಿಪೇರಿ ಮೊದಲಾದ ಕೆಲಸಕ್ಕೆ ಅಲೆಯುವುದು ತಪ್ಪುತ್ತದೆಂದರು.



ಗಂಗೂರು, ಗೆಂಡೆಹಳ್ಳಿ, ಹಗರೆ ವಿದ್ಯುತ್ ವಿತರಣಾ ಕೇಂದ್ರಗಳನ್ನು ಸಾಮರ್ಥ್ಯ ಹೆಚ್ಚಿಸಲು ಹಣ ಮಂಜೂರಾಗಿದೆ. ಗುತ್ತಿಗೆದಾರರು ಟೆಂಡರ್ ಪಡೆಯಲು ಮುಂದೆ ಬಂದಿಲ್ಲವೆಂದು ಮರು ಟೆಂಡರ್ ಕರೆಯಲಾಗಿದೆ. ಅಡಗೂರು ವಿದ್ಯುತ್ ವಿತರಣಾ ಕೇಂದ್ರ ಮಂಜೂರಾಗಿದ್ದು, ತಟ್ಟೆಹಳ್ಳಿ ಬಳಿ ಜಮೀನು ಗೊತ್ತು ಮಾಡಿದ್ದ ಜಮೀನು ದರಖಾಸ್ತು ಪ್ರಕ್ರಿಯೆಯಲ್ಲಿರುವುದರಿಂದ ಶಿವಪುರ ಕಾವಲು ಬಳಿಯ ಗೋಮಾಳದಲ್ಲಿ 30 ಎಕರೆ ಜಮೀನು ಮಂಜೂರಾತಿಗೆ ಪ್ರಕ್ರಿಯೆ ನಡೆಯುತ್ತಿದೆಯೆಂದು ಶಿವರಾಮ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎನ್.ಶರತ್, ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಬಂಡಿಲಕ್ಕನಕೊಪ್ಪಲು ಸುರೇಶ್, ಮುಖಂಡರಾದ ಕೆ.ಎಂ.ವೀರಣ್ಣ, ಗಂಗೂರು ಸಂತೋಷ್, ಲೀಲಾವತಿ, ಪುನೀತ್, ಯಶ್ವಂತ್, ಮುಬಾರಕ್, ನಾಗೇಗೌಡ, ಹಬೀಬ್ ಭಾಗವಹಿಸಿದ್ದರು.

# ಸದನದಲ್ಲಿ ಅಂಗನವಾಡಿ ನೌಕರರ ಪರ ಧ್ವನಿ ಎತ್ತಲು ಮನವಿ

## ಶಾಸಕ ಹೆಚ್.ಪಿ.ಸ್ವರೂಪ್‌ಗೆ ಕೋರಿಕೆ

• ಪ್ರಜೋದಯ ವರದಿ

**ಹಾಸನ:** ಅಂಗನವಾಡಿ ನೌಕರರ ಸಮಸ್ಯೆ ಕುರಿತು ವಿಧಾನಸಭೆ ಅಧಿವೇಶನದಲ್ಲಿ ಧ್ವನಿ ಎತ್ತುವಂತೆ ಒತ್ತಾಯಿಸಿ ಶಾಸಕ ಹೆಚ್.ಪಿ.ಸ್ವರೂಪ್ ಅವರಿಗೆ ರಾಜ್ಯ ಅಂಗನವಾಡಿ ನೌಕರರ ಸಂಘದಿಂದ ಮನವಿ ಸಲ್ಲಿಸಲಾಯಿತು.

ಅಂಗನವಾಡಿ ನೌಕರರನ್ನು ಕನಿಷ್ಠ ಕೂಲಿ ಕಾಯ್ದೆಯ ವ್ಯಾಪ್ತಿಗೆ ತಂದು ಇಎಸ್‌ಐ, ಪಿಎಫ್ ಸೌಲಭ್ಯ ಕಲ್ಪಿಸಬೇಕು. ಅಂಗನವಾಡಿ ಕೇಂದ್ರಕ್ಕೆ ಸರಬರಾಜು ಮಾಡುವ ಆಹಾರ ಪದಾರ್ಥಗಳು ಗುಣಮಟ್ಟ ಸರಿ ಇಲ್ಲದ ಕಾರಣ ಬಿಎಸ್ ಪರವಾನಿಗೆ ರದ್ದು ಮಾಡಿ ಸ್ಥಳೀಯವಾಗಿ ಸಿಗುವ ಆಯಾ ಪ್ರದೇಶಕ್ಕೆ ಅನುಗುಣವಾಗಿ ಸ್ಥಳೀಯ ಆಹಾರ ಸರಬರಾಜು ಮಾಡಬೇಕು. ಶಿಶು ಅಭಿವೃದ್ಧಿ ಯೋಜನೆಗಾಗಿ ದುಡಿದು ಬರಿಗೈಯಲ್ಲಿ 2011ರಿಂದ 2023 ಮಾರ್ಚ್ ತನಕ ನಿವೃತ್ತ ರಾದ ಕಾರ್ಯಕರ್ತೆ ಸಹಾಯಕಿಯರಿಗೂ ಗ್ರಾಚ್ಯುಟಿ ಹಣ 183 ಕೋಟಿ ರೂ. ಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ ಹುದ್ದೆ ಮತ್ತು ಇಲಾಖೆಯಲ್ಲಿ ಖಾಲಿ ಇರುವ ಮೇಲ್ವಿಚಾರಕಿ, ಸಿಡಿಪಿಓ ಹುದ್ದೆ ತುಂಬಬೇಕು. ಚುನಾವಣೆ ಕೆಲಸಗಳಿಂದ ಅಂಗನವಾಡಿ ನೌಕರರನ್ನು ಬಿಡುಗಡೆ ಮಾಡಬೇಕು. ಈಗಾಗಲೇ ರಾಜ್ಯದಲ್ಲಿ ಬಿಎಲ್‌ಓ ಕಾರಣ ಗಳಿಂದ ವಜಾಗೊಳಿಸಿರುವ ಕಾರ್ಯಕರ್ತೆಯರ ವಜಾ ಅಮಾನತು ತೆರವುಗೊಳಿಸಬೇಕೆಂದು ಆಗ್ರಹಿಸಿದರು.



6 ವರ್ಷದೊಳಗಿನ ಮಕ್ಕಳು ಐಸಿಡಿಎಸ್ ನಡಿಯಲ್ಲಿರುವುದನ್ನು ಖಾತ್ರಿಪಡಿಸಿಸಬೇಕು. ಇಂದಿನ ಸಾಮಾಜಿಕ ವ್ಯವಸ್ಥೆಗನುಗುಣವಾಗಿ ಅಂಗನವಾಡಿ ಕೇಂದ್ರಗಳು ಬಹಳಷ್ಟು ವೈಜ್ಞಾನಿಕವಾಗಿ ಮುಂದುವರೆದೂ ಕೆಲಸ ಮಾಡುತ್ತಿವೆ. ಈ ಕೇಂದ್ರಗಳಲ್ಲಿ ಇಂದು ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಕೊಡಲಾಗುತ್ತಿದೆ. 2025 ನವೆಂಬರ್‌ನಲ್ಲಿ ಮುಖ್ಯಮಂತ್ರಿ 5,000 ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ-ಯುಕೆಜಿ ಪ್ರಾರಂಭಿಸಲು ಘೋಷಿಸಿ ಆದೇಶ ಮಾಡಿದ್ದರು. ಆದ್ದರಿಂದ ಅಂಗನವಾಡಿ ಕೇಂದ್ರಗಳ ಪರಿಸ್ಥಿತಿಯನ್ನು ಅವಲೋಕಿಸಿ ಅನುದಾನ ಮೀಸಲಿಡಬೇಕೆಂದು ಒತ್ತಾಯಿಸಿದರು.

ನಗರ ಪ್ರದೇಶಗಳಲ್ಲಿ ಸಹಾಯಕಿ ಆಯ್ಕೆಗೆ ಇರುವ ಮಾನದಂಡ ಬದಲಾಯಿಸಬೇಕು ಮತ್ತು ನಗರ ಪ್ರದೇಶಗಳಲ್ಲಿರುವ ಖಾಲಿ ಹುದ್ದೆ ಬೇಗ ತುಂಬಬೇಕು. ಮುಂಗಡವಾಗಿ ಮೊಟ್ಟೆ, ಬಾಡಿಗೆ, ಗ್ಯಾಸ್, ಕರೆಸ್ಸಿ ಹಣ, ತರಕಾರಿ, ಆಡಳಿತ ವೆಚ್ಚ, ಸಾದಿಲ್ವಾರು ಹಾಕದೇ ಫಲಿತಾಂಶ ಕೇಳಬಾರದು. ಸಾಮೂಹಿಕ ಆರೋಗ್ಯ ವಿಮೆ ಜಾರಿ ಮಾಡಬೇಕು. ಬೆಲೆ ಏರಿಕೆಗೆ ಅನು ಗುಣವಾಗಿ ಕನಿಷ್ಠ ವೇತನ ಕೊಡಬೇಕು. ರಾಜ್ಯ ಸರ್ಕಾರ ಮತ್ತು ಖಾಸಗಿ ವಲಯಗಳಲ್ಲಿ ದುಡಿಯುವ ಮಹಿಳೆಯರಿಗೆ ನೀಡಿರುವ ಮುಟ್ಟಿನ ರಜೆ ಅಂಗನವಾಡಿ ಕಾರ್ಯಕರ್ತೆ- ಸಹಾಯಕಿಗೂ ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಅಂಗನವಾಡಿ ನೌಕರರಿಗೆ ಆರೋಗ್ಯ ಸಂಜೀವಿನಿ ಯೋಜನೆ ಅನ್ವಯ ಮಾಡಿ ಜಾರಿ ಮಾಡ ಬೇಕು. ನಿವೃತ್ತರಾದವರಿಗೆ ಇಡಿಗಂಟು ಹೆಚ್ಚಳ ಮಾಡಬೇಕು. ಐಸಿಡಿಎಸ್ ಪ್ರತ್ಯೇಕ ನಿರ್ದೇಶ ನಾಲಯ ಮಾಡಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸಿದರು.

ಸಂಘದ ತಾಲ್ಲೂಕು ಅಧ್ಯಕ್ಷೆ ಟಿ. ಹೆಚ್.ಜಯಂತಿ, ಖಜಾಂಚಿ ಮೀನಾಕ್ಷಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ದ್ರಾಕ್ಷಾಯಿಣಿ, ಗಾಯತ್ರಿ ಮತ್ತಿತರರು ಹಾಜರಿದ್ದರು.

# ರಾಮನಾಥಪುರ ತಂಬಾಕು ಮಾರುಕಟ್ಟೆಗೆ ಸಂಸದರ ಭೇಟಿ



• ಪ್ರಜೋದಯ ವರದಿ

**ಕೊಣನೂರು:** ಅರಕಲಗೂಡು ತಾಲ್ಲೂಕಿನ ರಾಮನಾಥಪುರ ತಂಬಾಕು ಹರಾಜು ಮಾರುಕಟ್ಟೆಗೆ ಸಂಸದ ಶ್ರೇಯಸ್ ಪಟೇಲ್ ಅವರು ಶನಿವಾರ ಭೇಟಿ ನೀಡಿ ಅಧಿಕಾರಿಗಳು ಮತ್ತು ಬೆಳೆಗಾರರೊಂದಿಗೆ ಚರ್ಚೆ ನಡೆಸಿದರು.

ಮಾರುಕಟ್ಟೆ ಅಧೀಕ್ಷಕರೊಂದಿಗೆ ಮಾತನಾಡಿದ ಅವರು, ತಂಬಾಕು ಬೆಲೆ ಕುಸಿತ ಕುರಿ ತಂತೆ ನಾನು ಈಗಾಗಲೇ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರ ಜೊತೆ ಮಾತನಾಡಿದ್ದೇನೆ. ಬೆಲೆ ಇಳಿಕೆ ಕುರಿತು ಮತ್ತೊಮ್ಮೆ ಸಚಿವರನ್ನು ಭೇಟಿಯಾಗಿ ಅಬಕಾರಿ ಸುಂಕವನ್ನು ತೆಗೆದು ತಂಬಾಕು ಬೆಳೆಗಾರರನ್ನು ಬೆಲೆ ಕುಸಿತದಿಂದ ಪಾರು ಮಾಡುವ ಕುರಿತು ಮಾತನಾಡುತ್ತೇನೆಂದರು. ಈ ವೇಳೆ ಬೆಳೆಗಾರರು ಸಹ ತಮಗೆ ಆಗುತ್ತಿರುವ ಅನ್ಯಾಯದ ಕುರಿತು ಅಹವಾಲು ಸಲ್ಲಿಸಿದರು.

ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಶ್ರೀಧರ್ ಗೌಡ, ಕಾಂಗ್ರೆಸ್ ಮುಖಂಡರು, ತಂಬಾಕು ಬೆಳೆಗಾರರ ಸಂಘದ ಪದಾಧಿಕಾರಿಗಳು, ಬೆಳೆಗಾರರು ಮತ್ತು ಅಧಿಕಾರಿಗಳು ಹಾಜರಿದ್ದರು.

# ಇಂದು ಬರಹಗಾರರ ಸಂಘದಿಂದ ಯುಗಾದಿ ಕಾವ್ಯ ಸಂಭ್ರಮ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ರಾಜ್ಯ ಬರಹಗಾರರ ಸಂಘದ ವತಿಯಿಂದ ಯುಗಾದಿ ಕಾವ್ಯ ಸಂಭ್ರಮ ಕಾರ್ಯಕ್ರಮ ಭಾನುವಾರ ನಗರದ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ನಡೆಯಲಿದೆ.

ಸಮಾರಂಭದಲ್ಲಿ 50ಕ್ಕೂ ಹೆಚ್ಚು ಕವಿಗಳಿಂದ ಕವನ ಸ್ಪರ್ಧೆ, ವಿವಿಧ ಕೃತಿಗಳ ಬಿಡುಗಡೆ, ಭರತನಾಟ್ಯ, ಸಾಧಕರಿಗೆ ಪ್ರಶಸ್ತಿ ಪ್ರದಾನ ನಡೆಯಲಿದೆ. ನಿವೃತ್ತ ಪ್ರಾಂಶುಪಾಲ ಜೆ.ಬಿ. ತಮ್ಮಣ್ಣಗೌಡ ಅವರಿಗೆ ಗುರು ಶ್ರೇಷ್ಠ ಪ್ರಶಸ್ತಿ, ಬಿ.ಎಸ್. ದೇಸಾಯಿ ಅವರಿಗೆ ಚಿತ್ರಕಲಾ ರತ್ನ ಪ್ರಶಸ್ತಿ, ಎಂ.ಜಿ. ಪರಮೇಶ್ ಮಡಬಲು ಅವರಿಗೆ ಸಾಹಿತ್ಯ ಸೌರಭ ಪ್ರಶಸ್ತಿ, ಅರಸೀಕೆರೆಯ ಯೋಗೇಶ್ ದಿಬ್ಬೂರು ಅವರಿಗೆ ಸಂಗೀತ ರತ್ನ ಪ್ರಶಸ್ತಿ, ವಿಜಯಕುಮಾರ್ ಅರಕಲಗೂಡು ಅವರಿಗೆ ಪತ್ರಿಕಾರತ್ನ ಪ್ರಶಸ್ತಿ, ಹಾಸನದ ಎಸ್.ಆರ್.ದಿನೇಶ್ ಅವರಿಗೆ ಕಲಾ ರತ್ನ ಪ್ರಶಸ್ತಿ, ಅರಕಲಗೂಡಿನ ಬಿ.ಎನ್.ರಮೇಶ್ ಅವರಿಗೆ ಜ್ಞಾನ ಜ್ಯೋತಿ ಪ್ರಶಸ್ತಿ, ಇಂದಿರಾ ಲೋಕೇಶ್ ಅವರಿಗೆ ಸಾಹಿತ್ಯ ರತ್ನ ಪ್ರಶಸ್ತಿ, ಚನ್ನರಾಯಪಟ್ಟಣದ ಕೆ.ಎಲ್. ಹರೀಶ್ ಅವರಿಗೆ ವಿದ್ಯಾಶ್ರೀ ಪ್ರಶಸ್ತಿ, ಕೋಡ ರಾಮನಹಳ್ಳಿ ಹರೀಶ್ ಕುಮಾರ್ ಅವರಿಗೆ ಸಾಮಾಜಿಕ ಸೇವಾ ರತ್ನ ಪ್ರಶಸ್ತಿ, ಗಂಗರ ಶ್ರೀಕಾಂತ್ ಅವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ, ಅರಕಲಗೂಡಿನ ಕೆ.ಹರೀಶ್ ಅವರಿಗೆ ಶಿಕ್ಷಣ ಸೌರಭ ಪ್ರಶಸ್ತಿ, ಹೆಚ್.ವಿ.ಹರೀಶ್ ಅವರಿಗೆ ವಿಶ್ವಕರ್ಮ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಗೌರಮ್ಮ ನಂಜೇಗೌಡ ಅವರ ಇಬ್ಬನಿಯಲ್ಲಿ ಅರಳಿದ ಹೂವುಗಳು ಕವನ ಸಂಕಲನ, ಸಾಹಿತಿ ವಿಶ್ವಾಸ್ ಡಿ.ಗೌಡ ಅವರ ಕಾಲದ ಹೆಜ್ಜೆಯ ಗುರುತುಗಳು, ಹಿರಿಯ ಸಾಹಿತಿ ಎನ್.ಎಲ್.ಚನ್ನೇಗೌಡ ಅವರ ಸೀಗೆನಾಡ ಸಿರಿ ಕೃತಿ ಬಿಡಗಡೆ ನಡೆಯಲಿದೆ ಎಂದು ಜಿಲ್ಲಾ ಬರಹಗಾರರ ಸಂಘದ ಜಿಲ್ಲಾಧ್ಯಕ್ಷ ಸುಂದರೇಶ್ ಡಿ.ಉಡುವಾರೆ ಅವರು ತಿಳಿಸಿದ್ದಾರೆ.

# ಎ.ವಿ.ಕೆ. ಪದವಿ ಪೂರ್ವ ಕಾಲೇಜು ಆಡಳಿತದಲ್ಲಿ ವಿನಾಕಾರಣ ಹಸ್ತಕ್ಷೇಪ



• ಪ್ರಜೋದಯ ವರದಿ

**ಹಾಸನ:** ನಗರದ ಎ.ವಿ.ಕಾಂತಮ್ಮ ಪದವಿ ಪೂರ್ವ ಕಾಲೇಜಿನ ಶೈಕ್ಷಣಿಕ ವರ್ಷದ ಮಧ್ಯದಲ್ಲೇ ಬೇರೆಯವರನ್ನು ಪ್ರಾಂಶುಪಾಲರಾಗಿ ನಿಯೋಜಿಸುವ ಮೂಲಕ ಮಕ್ಕಳ ಶಿಕ್ಷಣದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವಂತೆ ಮಾಡಿದ್ದಾರೆಂದು ಪ್ರಾಂಶುಪಾಲ ಹೆಚ್.ಎಸ್.ಚಂದ್ರಶೇಖರ್ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಜ.15 ರಂದು ಸೀನಾ ಎಂಬುವವ ರನ್ನು ಪ್ರಾಂಶುಪಾಲರು ಎಂದು ಕೂರಿಸುತ್ತಾರೆ. ಪ್ರಜ್ವಲ್ ಎಂಬುವವರನ್ನು ಉಪನ್ಯಾಸಕರನ್ನಾಗಿ ಕಾಲೇಜಿಗೆ ಕಳುಹಿಸುತ್ತಾರೆ. ಈ ಎಲ್ಲಾ ಗೊಂದಲಗಳಿಗೆ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಜಗದೀಶ್ ಚೌಡಳ್ಳಿ ಹಾಗು ಕಾಲೇಜಿನ ಉಪಾಧ್ಯಕ್ಷ ನಾಗರಾಜ್ ಜೈನ್ ಕಾರಣವೆಂದು ದೂರಿದರು.

ನಾನು 2021ರಿಂದ ಉಪನ್ಯಾಸಕನಾಗಿ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. 2024ರಲ್ಲಿ ಎಂಸಿಇ ಆಡಳಿತ ಮಂಡಳಿ ಮಾಜಿ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಹಾಗು 24 ನಿರ್ದೇಶಕರ ಸೂಚನೆಯಂತೆ ಪ್ರಾಂಶುಪಾಲನಾಗಿ ಅಧಿಕಾರ ವಹಿಸಿಕೊಂಡಿದ್ದೇನೆ. ಕೇವಲ 60 ಮಕ್ಕಳಿದ್ದ ಕಾಲೇಜಿಗೆ ವಿವಿಧ ಪ್ರಯತ್ನಗಳ ಮೂಲಕ 330 ಮಕ್ಕಳು ಬರುವ ಹಾಗೆ ಮಾಡಿದ್ದೇವೆ. ಉತ್ತಮ ಬೋಧನೆ, ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ನೀಡುವ ಮೂಲಕ ಸಂಸ್ಥೆಯ ಹೆಸರು ಹೆಚ್ಚಿಸಿದ್ದೇವೆ. ನಮ್ಮಿಂದ ಸಂಸ್ಥೆಗೆ ಯಾವುದೇ ನಷ್ಟವಾಗಿಲ್ಲ. 25 ಲಕ್ಷ ರೂ. ಆದಾಯ ಬಂದಿದೆಯೆಂದು ಹೇಳಿದರು.

ಜ.15 ರಂದು ಬೇರೆ ಸಂಸ್ಥೆಯ ಇಬ್ಬರನ್ನು ಕರೆದುಕೊಂಡು ಬಂದು ಪ್ರಾಂಶುಪಾಲರನ್ನಾಗಿಸಿದರೆ ಅದನ್ನು ಒಪ್ಪಿಕೊಳ್ಳುವುದು ಹೇಗೆ ಸಾಧ್ಯ. ಈ ಸಂಬಂಧ ಪೋಷಕರು ಹಾಗು ಮಕ್ಕಳು ನಮ್ಮ ತಂಡವೇ ಮುಂದುವರಿಯಲಿ ಎಂದು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. ಈ ಶೈಕ್ಷಣಿಕ ವರ್ಷ ಪೂರ್ಣಗೊಳ್ಳುವ ವರೆಗೆ ನಮ್ಮನ್ನೇ ಮುಂದುವರಿಸಬೇಕೆಂದು ಮಕ್ಕಳು ಕೋರಿದ್ದಾರೆ. ಆದರೆ, ಜಗದೀಶ್ ಚೌಡಳ್ಳಿ ಅವರು ಸುದ್ದಿಗೋಷ್ಠಿಯಲ್ಲಿ ನಾವು ವ್ಯವಹಾರದಲ್ಲಿ ಮೋಸ ಮಾಡುತ್ತಿದ್ದೇ ವೆಂದು ಸುಳ್ಳು ಆರೋಪ ಮಾಡುತ್ತಿದ್ದಾರೆಂದರು.

ದ್ವಿತೀಯ ಪಿಯುಸಿ ಪರೀಕ್ಷೆ ನಡೆಯುತ್ತಿರುವ ದಿನಗಳಲ್ಲೇ ಈ ರೀತಿ ಹಸ್ತಕ್ಷೇಪ ಮಾಡಿದ್ದರಿಂದ ಮಕ್ಕಳ ವ್ಯಾಸಂಗದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಸಂಸ್ಥೆಯ ಬೈಲಾ ಪ್ರಕಾರ ಪ್ರಾಂಶುಪಾಲರೇ ಆಡಳಿತ ನಿರ್ವಹಣೆ ಮಾಡಬೇಕು ಎಂದಿದೆ. ಅದರಂತೆ ಸಿಬ್ಬಂದಿ ವೇತನ ಹಾಗು ಇತರ ಖರ್ಚು ಕಳೆದು ಉಳಿದ ಹಣವನ್ನು ಸಂಸ್ಥೆಯ ಬ್ಯಾಂಕ್ ಖಾತೆಗೆ ಜಮೆ ಮಾಡು ತ್ತೇವೆ. ನಮ್ಮಿಂದ ಲೋಪವಾಗುತ್ತಿದೆಯೆಂದು ಸುಳ್ಳು ಹೇಳುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ಉಪನ್ಯಾಸಕರಾದ ಸುನಿಲ್, ದಿನೇಶ್, ಪ್ರದೀಪ್, ಪೋಷಕರಾದ ವಸಂತ, ಯಶೋಧಾ ಹಾಜರಿದ್ದರು.

# ಗಾಂಜಾ ಅಮಲಿನಲ್ಲಿ ಅಡ್ಡಾದಿಡ್ಡಿ ಆಟೋ ಓಡಿಸುತ್ತಿದ್ದವರಿಗೆ ಗೂಸಾ

• ಪ್ರಜೋದಯ ವರದಿ



**ಹಾಸನ:** ಗಾಂಜಾ ಅಮಲಿನಲ್ಲಿ ಆಟೋ ಓಡಿಸುತ್ತಾ ಸಾರ್ವಜನಿಕರಲ್ಲಿ ಭಯ ಹುಟ್ಟಿಸಿದ್ದ ಇಬ್ಬರು ಪುಂಡರನ್ನು ಸಾರ್ವಜನಿಕರು ಹಿಡಿದು ಗೂಸಾ ನೀಡಿ ಪೊಲೀಸರಿಗೆ ಒಪ್ಪಿಸಿದ ಘಟನೆ ನಗರದಲ್ಲಿ ನಡೆದಿದೆ.

ನಗರದ ಚಂದು ಹಾಗು ಪಿರಿಯಾಪಟ್ಟಣದ ಮನೋಜ್ ಬಂಧಿತ ಆರೋಪಿಗಳು. ಮನೋಜ್ ನಗರದ ಖಾಸಗಿ ಕಾಲೇಜಿನಲ್ಲಿ ಪ್ಯಾರಾಮೆಡಿಕಲ್ ಓದುತ್ತಿದ್ದಾನೆ. ಚಂದು ಆಟೋ ಚಾಲಕನಾಗಿದ್ದು ಗಾಂಜಾ ಅಮಲು ಇಬ್ಬರನ್ನೂ ಸ್ನೇಹಿತರನ್ನಾಗಿಸಿದೆ ಎನ್ನಲಾಗಿದೆ.

ಶುಕ್ರವಾರ ಸಂಜೆ ಆರ್.ಸಿ.ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ಆಟೋ ಚಲಾಯಿಸುತ್ತಿದ್ದುದನ್ನು ಕಂಡು ಸಾರ್ವಜನಿಕರು ನಿಧಾನಕ್ಕೆ ಹೋಗುವಂತೆ ಬುದ್ಧಿವಾದ ಹೇಳಿದ್ದರು. ಅದಕ್ಕೆ ತಲೆಕೆಡಿಸಿ ಕೊಳ್ಳದ ಅವರು ಮನಬಂದಂತೆ ಓಡಿಸಿ ಮಹಿಳೆ ಯೊಬ್ಬರಿಗೆ ಡಿಕ್ಕಿ ಮಾಡಿ ಗಾಯಗೊಳಿಸಿದ್ದಾರೆ. ಆದರೂ ಆಟೋ ನಿಲ್ಲಿಸದೆ ಓಡಾಡಿರುವುದನ್ನು ಕಂಡ ಪತ್ರಕರ್ತ ನಾಗರಾಜ್ ಹಾಗು ಸ್ನೇಹಿತರು ಬೈಕ್ ಮೂಲಕ ಬೆನ್ನಟ್ಟಿ ಹಿಡಿದಿದ್ದಾರೆ.

ಸಾಲಗಾಮೆ ರಸ್ತೆಯ ಸರಸ್ವತಿ ದೇವಾಲಯ ಸಮೀಪ ಪುಂಡರು ಹೋಗುತ್ತಿದ್ದ ಆಟೋಗೆ ಎದುರುಗಡೆಯಿಂದ ಮತ್ತೊಂದು ಆಟೋ ಬಂದಿದ್ದರಿಂದ ಮುಂದೆ ಹೋಗಲಾಗದೆ ನಿಲ್ಲಿಸಿದ್ದಾರೆ. ಅಷ್ಟರಲ್ಲಿ ಬೈಕ್‌ನಲ್ಲಿ ಹೋಗುತ್ತಿದ್ದವರು ಹಿಡಿದು ಅವರನ್ನು ಆಟೋದಿಂದ ಕೆಳಗಿಳಿಸಿ ದ್ದಾರೆ. ಅಡ್ಡಾದಿಡ್ಡಿ ಆಟೋ ಓಡಿಸುತ್ತಿದ್ದುದನ್ನು ಗಮನಿಸಿದ್ದ ಸಾರ್ವಜನಿಕರು ತಕ್ಷಣವೇ ದೌಡಾಯಿಸಿ ಹಿಗ್ಗಾಮುಗ್ಗಾ ಥಳಿಸಿದ್ದಾರೆ. ನಂತರ ನಗರ ಠಾಣೆ ಪೊಲೀಸರು ಸ್ಥಳಕ್ಕಾಗಮಿಸಿ ಅವರನ್ನು ವಶಕ್ಕೆ ಪಡೆದರು.

# ಗುಣಮಟ್ಟದ ಹಣ್ಣು ಮಾರಾಟಕ್ಕೆ ವ್ಯಾಪಾರಿಗಳಿಗೆ ಸೂಚನೆ

• ಪ್ರಜೋದಯ ವರದಿ



**ಹಾಸನ:** ಬೇಸಿಗೆ ಅವಧಿಯಲ್ಲಿ ಹಣ್ಣುಗಳಿಗೆ ಬೇಡಿಕೆ ಹೆಚ್ಚಿದ್ದು, ಗುಣ ಮಟ್ಟದ ಪದಾರ್ಥಮಾರಾಟಕ್ಕೆ ಆದ್ಯತೆ ನೀಡಬೇಕೆಂದು ಆಹಾರ ಸುರಕ್ಷತಾ ಅಧಿಕಾರಿ ಕೆ.ವಿನಯ್ ಅವರು ವ್ಯಾಪಾರಿಗಳಿಗೆ ಸೂಚನೆ ನೀಡಿದರು.

ಪಟ್ಟಣದ ವಿವಿಧ ಹಣ್ಣು ಮಾರಾಟ ಕೇಂದ್ರ ಹಾಗು ಬೀದಿ ಬದಿ ಹಣ್ಣು ವ್ಯಾಪಾರ ಸ್ಥಳಗಳಿಗೆ ಶನಿವಾರ ಭೇಟಿ ನೀಡಿದ ಅವರು, ಬೇಸಿಗೆ ಕಾಲವಾಗಿರುವುದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಾಗಿರುವ ಹಿನ್ನಲೆಯಲ್ಲಿ ವ್ಯಾಪಾರಿಗಳು ಎಚ್ಚರಿಕೆ ವಹಿಸಬೇಕು. ಬಿಸಿಲ ತಾಪದಿಂದ ಪಾರಾಗಲು ಸಾರ್ವ ಜನಿಕರು ಹೆಚ್ಚಿನ ಪ್ರಮಾಣದಲ್ಲಿ ಹಣ್ಣುಗಳನ್ನು ಖರೀದಿಸುತ್ತಾರೆ. ಗುಣಮಟ್ಟದ ಹಾಗು ಶುಚಿತ್ವಯುತ ಹಣ್ಣುಗಳನ್ನು ಮಾತ್ರ ಮಾರಾಟ ಮಾಡಬೇಕೆಂದು ನಿರ್ದೇಶನ ನೀಡಿದರು.

ಹಣ್ಣುಗಳನ್ನು ಸ್ವಚ್ಛವಾದ ಸ್ಥಳದಲ್ಲಿ ಇಟ್ಟು ಮಾರಾಟ ಮಾಡ ಬೇಕು, ಧೂಳು-ಕಸದಿಂದ ದೂರ ಇರಿಸಬೇಕು, ಕತ್ತರಿಸಿದ ಹಣ್ಣು ಗಳನ್ನು ಮುಚ್ಚಿರಬೇಕು. ಗ್ರಾಹಕರಿಗೆ ಆರೋಗ್ಯಕರ ಆಹಾರ ದೊರೆ ಯುವಂತೆ ಎಚ್ಚರಿಕೆ ವಹಿಸಬೇಕೆಂದು ತಿಳಿಸಲಾಯಿತು. ಜೊತೆಗೆ ಬಳಕೆಯ ಪಾತ್ರೆ, ಚಾಕು ಮತ್ತು ಮಾರಾಟ ಸ್ಥಳವನ್ನು ಸ್ವಚ್ಛವಾಗಿರಿಸು ವುದು ಅಗತ್ಯ. ನಿಯಮ ಉಲ್ಲಂಘನೆ ಕಂಡು ಬಂದರೆ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಸಿದರು.

ಇದೇ ಸಂದರ್ಭದಲ್ಲಿ ಇಲಾಖೆಯ ಆದೇಶದ ಮೇರೆಗೆ ಕಲ್ಲಂಗಡಿ ಹಣ್ಣುಗಳ ಗುಣಮಟ್ಟ ಪರೀಕ್ಷೆಗಾಗಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಯಿತು. ಬೀದಿ ಬದಿ ಹಣ್ಣು ಮಾರಾಟ ಮಾಡುವ ವ್ಯಾಪಾರಸ್ಥರಿಗೆ ಅರಿವು ಮೂಡಿಸಲಾಯಿತು.

ಸಾರ್ವಜನಿಕ ಆಸ್ಪತ್ರೆ, ಆರೋಗ್ಯ ನಿರೀಕ್ಷಣಾಧಿಕಾರಿ ಜೆ.ಟಿ.ಸ್ವಾಮಿ ಮತ್ತಿತರರಿದ್ದರು.

# ಫ್ಲಿಪ್ ಕಾರ್ಟ್‌ನಿಂದ 1 ರೂ. ಒಂದು ಲೀಟರ್ ಹಾಲು ಮಾರಾಟ: ಡಿ.ಕೆ.ಸುರೇಶ್ ಕಿಡಿ

• ಪ್ರಜೋದಯ ವರದಿ



**ಬೆಂಗಳೂರು:** ಒಂದು ರೂಪಾಯಿಗೆ ಒಂದು ಲೀಟರ್ ಹಾಲು ಮಾರುತ್ತಿರುವ ಫ್ಲಿಪ್ ಕಾರ್ಟ್ ಸಂಸ್ಥೆ ವಿರುದ್ಧ ನವದೆಹಲಿಯ ಕಾಂಪಿಟೇಷನ್ ಕಮಿಷನ್ ಆಫ್ ಇಂಡಿಯಾದ ಅಧ್ಯಕ್ಷ ರವನೀತ್ ಕೌರ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಪತ್ರ ಬರೆದಿದ್ದಾರೆ.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಸುರೇಶ್ ಅವರು, ಹಣ ಮಾಡುವ ಭರದಲ್ಲಿ ಫ್ಲಿಪ್ ಕಾರ್ಟ್ ಸಂಸ್ಥೆ ಹೀಗೆ ಹಾಲು ನೀಡಲು ಮುಂದಾಗುವ ಮೂಲಕ ರೈತ ಸಮುದಾಯವನ್ನು ಧ್ವಂಸ ಮಾಡಲು ಹೊರಟಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಮಾರುಕಟ್ಟೆಯನ್ನು ಆವರಿಸಿಕೊಳ್ಳಬೇಕೆಂದು ಮಾಡುತ್ತಿರುವ ಸ್ಪರ್ಧೆಯಿಂದ ರೈತರಿಗೆ ಹೊಡೆತ ಬೀಳುತ್ತದೆ. ಅದಕ್ಕಾಗಿಯೇ ಸುಮಾರು 2 ಸಾವಿರ ಕೋಟಿ ವೆಚ್ಚ ಮಾಡಲಾಗಿದೆ ಎಂದರು.

**14.5 ಲಕ್ಷ ಲೀ ಹಾಲು ಮಾರಾಟ**

ಈಗಾಗಲೇ 14.5 ಲಕ್ಷ ಲೀಟರ್ ಹಾಲು ಮಾರಾಟ ಆಗಿದೆ ಎಂದು ಫ್ಲಿಪ್ ಕಾರ್ಟ್ ಜಾಹೀರಾತು ನೀಡಿದೆ. ಆ ಕಂಪನಿಯವರು ಎಷ್ಟು ದಿನ ಈ ರೀತಿ ಹಾಲು ಕೊಡುತ್ತಾರೆ ಎಂಬುದನ್ನು ಬಹಿರಂಗಗೊಳಿಸಬೇಕು ಎಂದರು.

ನಂದಿನಿ ಹಾಲಿನ ಮಾರಾಟ ಪ್ರಮಾಣ ಕಡಿಮೆಯಾಗಿದೆಯೇ ಎಂಬ ಪ್ರಶ್ನೆಗೆ, ಮಾರುಕಟ್ಟೆಯಲ್ಲಿ ನಂದಿನಿ ಹಾಲು ಮಾತ್ರ ಇಲ್ಲ. ಅನೇಕ ಕಂಪನಿಗಳಿವೆ. ಬಮೂಲ್ ಒಕ್ಕೂಟಕ್ಕೆ 40 ಸಾವಿರದಿಂದ 50 ಸಾವಿರ ಲೀಟರ್ ಹಾಲು ಮಾರಾಟ ಕಡಿಮೆಯಾಗಿದೆ. ಎಷ್ಟು ದಿನದಿಂದ ಇದು ಕಡಿಮೆಯಾಗಿದೆ ಎಂದು ತಿಳಿದುಕೊಳ್ಳಬೇಕಿದೆ ಎಂದರು.

ಈ ವಿಚಾರವಾಗಿ ಮಾಧ್ಯಮಗಳು ರಾಷ್ಟ್ರದ ಗಮನ ಸೆಳೆಯಬೇಕು. ರೈತರ ಪರವಾಗಿ ನಿಲ್ಲಬೇಕು. ರೈತರು ಹೋರಾಟಕ್ಕೆ ಇಳಿಯಬೇಕು ಎಂದೂ ಅವರು ಹೇಳಿದರು.

# ಕೃಷ್ಣಾ ಮೇಲ್ದಂಡೆ ಯೋಜನೆಗೆ 5 ಸಾವಿರ ಕೋಟಿ ರೂ.: ಸಿಎಂ

• ಪ್ರಜೋದಯ ವರದಿ



**ಬಾಗಲಕೋಟೆ:** ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದ ಭೂಸ್ವಾಧೀನಕ್ಕೆ ಪೂರಕ ಬಜೆಟ್‌ನಲ್ಲಿ 5 ಸಾವಿರ ಕೋಟಿ ರೂ. ಅನುದಾನ ನೀಡಲಾ ಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಶನಿವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಬಜೆಟ್‌ನಲ್ಲಿ ಈಗಾಗಲೇ 3 ಸಾವಿರ ಕೋಟಿ ರೂ. ಅನುದಾನ ನೀಡಲಾಗಿತ್ತು. ಕಡಿಮೆಯಾಗುತ್ತದೆ ಎಂಬ ಮನವಿ ಮೇರೆಗೆ ಹೆಚ್ಚುವರಿ ಅನುದಾನ ನೀಡಲಾಗುವುದೆಂದರು.

ಯುಕೆಪಿ ವಿಷಯದಲ್ಲಿ 13 ವರ್ಷಗಳಾದರೂ ಗೆಜೆಟ್ ನೋಟಿಫಿಕೇಷನ್ ಹೊರಡಿಸಿಲ್ಲ. ಗುಜರಾತ್‌ನಲ್ಲಿ ನದಿ ನೀರು ಹಂಚಿಕೆ ಕುರಿತು ವ್ಯಾಜ್ಯ ಇದ್ದರೂ, ಗೆಜೆಟ್ ನೋಟಿಫಿಕೇಷನ್ ಹೊರಡಿಸಲಾಯಿತು. ಪ್ರಧಾನಿ ಮೋದಿ, ಸಚಿವ ಅಮಿತ್ ಷಾ ಅವರು ತಮ್ಮ ಸ್ವಂತ ರಾಜ್ಯಕ್ಕೆ ಮಾಡಿದ ಅನುಕೂಲವನ್ನು ಯುಕೆಪಿ ವಿಷಯದಲ್ಲಿ ಕರ್ನಾಟಕಕ್ಕೆ ಏಕೆ ಮಾಡುತ್ತಿಲ್ಲವೆಂದು ಪ್ರಶ್ನಿಸಿದರು.

ಅನೇಕ ಬಾರಿ ಪತ್ರ ಬರೆದಿದ್ದೇನೆ. ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿ ಮನವಿ ಮಾಡಲಾಗಿದೆ. ಆದರೂ, ಕೇಂದ್ರ ಸರ್ಕಾರ ಸ್ಪಂದಿಸಲಿಲ್ಲ. ಮಹದಾಯಿ ವಿಷಯದಲ್ಲಿ ಯಾವುದೇ ಕೋರ್ಟ್‌ನಲ್ಲಿ ಪ್ರಕರಣಗಳಿಲ್ಲ. ಆದರೂ, ಅನುಮತಿ ನೀಡುತ್ತಿಲ್ಲವೆಂದು ವಾಗ್ದಾಳಿ ನಡೆಸಿದರು.

# ಹೆಣ್ಣು ಮಕ್ಕಳು ಅಡುಗೆಮನೆಗಷ್ಟೇ ಸೀಮಿತವಲ್ಲ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕುಟುಂಬದ ಜವಾಬ್ದಾರಿ ಹಾಗೂ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ ಎಂದು ಸಂಪನ್ಮೂಲ ವ್ಯಕ್ತಿ ಡಾ||ಭಾರತಿ ರವೀಂದ್ರನಾಥ್ ಅವರು ಹೇಳಿದರು.

ಪಟ್ಟಣದ ಎಸ್‌ಬಿಜಿ ಕಲ್ಯಾಣ ಮಂಟಪದಲ್ಲಿ ಬದುಕು ಫೌಂಡೇಶನ್ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ರಾಜಕೀಯ, ಹೈನುಗಾರಿಕೆ, ಶಿಕ್ಷಣ, ವಿಜ್ಞಾನ, ಕೃಷಿ ಹಾಗು ಸಮಾಜ ಸೇವೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಕಾರ್ಯವೈಖರಿ ಶ್ಲಾಘನೀಯವಾದುದು. ಕುಟುಂಬ ನಿರ್ವಹಣೆಯಷ್ಟೇ ಅಲ್ಲದೆ ಮನೆಯಿಂದ ಹೊರ ಜಗತ್ತಿನಲ್ಲಿಯೂ ಸಾಧಿಸಬಲ್ಲಳು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಹಿಳೆಯರು ಇತ್ತೀಚಿನ ದಿನಗಳಲ್ಲಿ ವಿವಿಧ ಬಗೆಯ ಕ್ಯಾನ್ಸರ್ ಖಾಯಿಲೆಗೆ ತುತ್ತಾಗುತ್ತಿ ದ್ದಾರೆ. ಕ್ಯಾನ್ಸರ್ ಕಾಣಿಸಿಕೊಂಡರೆ ಭಯಪಡುವ ಅಗತ್ಯವಿಲ್ಲ. ಕ್ಯಾನ್ಸರ್ ಲಕ್ಷಣಗಳು ಕಂಡ ತಕ್ಷಣ ವೈದ್ಯರ ಬಳಿ ತೆರಳಿದರೆ ಗುಣಪಡಿಸಬಹುದೆಂದರು.




ಆಹಾರ ಪದ್ಧತಿ ಹಾಗು ಜೀವನ ಶೈಲಿ ಬದಲಾವಣೆಯು ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಆಧುನಿಕ ಯಂತ್ರೋಪಕರಣಗಳು ಬಂದ ನಂತರ ಶ್ರಮದ ಕೆಲಸ ಕಡಿಮೆಯಾಗುತ್ತಿದೆ. ಪರಿಣಾಮವಾಗಿ ವಿವಿಧ ಖಾಯಿಲೆ ಆವರಿಸಿಕೊಳ್ಳುತ್ತಿವೆ. ಆಹಾರ ಪಥ್ಯ, ಯೋಗ ಹಾಗು ಧ್ಯಾನ ಮಾಡುವ ಮೂಲಕ ಆರೋಗ್ಯದ ಕಡೆಗೆ ಗಮನ ಹರಿಸಬೇಕೆಂದು ಸಲಹೆ ನೀಡಿದರು.

ಬದುಕು ಫೌಂಡೇಶನ್ ಟ್ರಸ್ಟಿ ನಾಗರಾಜ ಗೌಡ ಅವರು ಮಾತನಾಡಿ, ಮಹಿಳೆಯರು ದುಡಿಮೆ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳುವ ಮೂಲಕ ಸದೃಢರಾಗಬೇಕು. ಶ್ರಮ ವಹಿಸಿ ದುಡಿಯುವ ಮಹಿಳೆಯರಿಗೆ ಉದ್ಯೋಗ ಅವಕಾಶ ಸಿಗಬೇಕು ಎಂಬುದೇ ಬದುಕು ಫೌಂಡೇಶನ್ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ ಎಂದರು.

ಪ್ರಸಕ್ತ ದಿನಗಳಲ್ಲಿ ಹೆಣ್ಣಿಗೆ ಶಿಕ್ಷಣ ಅತಿ ಮುಖ್ಯ. ಬ್ಯಾಂಕ್ ಹಾಗು ಸಂಘ-ಸಂಸ್ಥೆಗಳು ಮಹಿಳೆಯರಿಗೆ ಹೆಚ್ಚು ಸಾಲ ಸೌಲಭ್ಯ ನೀಡುತ್ತಿರುವುದು ಹೆಣ್ಣು ಮಕ್ಕಳ ಶ್ರಮ, ದುಡಿಮೆ ಹಾಗು ನಂಬಿಕೆಗೆ ಸಾಕ್ಷಿಯಾಗಿದೆಯೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಮುಖರಾದ ಸುಮಿತ್ರ, ರಮೇಶ್, ಸಹನ, ಶೋಭಾ, ಲಲಿತ, ರಂಜಿತಾ, ಐಶ್ವರ್ಯ ಇತರರಿದ್ದರು.

# ಭಾವ ಲಹರಿ

## ಬಂಜೆಂಬ ಶಬುದವ ಬಿಡಿಸಿದವರ

# ನೋವು-ನಲಿವಿನ ಕಥೆ

**ಕಂದನ ಕೊಡು ಶಿವನೆ ಬಂಧನ ಪಡಲಾರೆ**
**ಬಂಜೆಂಬ ಶಬುದ ಹೊರಲಾರೆ ಭೂಮಿ ಮ್ಯಾಲ**
**ಹಂಗಿನ ಬಾನ ಉಣಲಾರೆ!**

ನಮ್ಮ ಭಾರತೀಯ ಸಮಾಜವು, ಹುಟ್ಟುವಾಗಲೇ ಪ್ರತಿಯೊಬ್ಬರೂ ನಾಲ್ಕು ಋಣಗಳನ್ನು ಹೊತ್ತುಕೊಂಡು ಹುಟ್ಟುತ್ತಾರೆ ಎಂದು ನಂಬಿದೆ. ದೈವ ಋಣ, ಪಿತೃಋಣ, ಆಚಾರ್ಯ ಋಣ ಹಾಗೂ ಸಮಾಜ ಋಣ. ಪಿತೃಋಣವು ತೀರಬೇಕಾದರೆ ತಲೆತಲಾಂತರದಿಂದ ಬಂದ ಹಿರಿಯರ ವಂಶವಾಹಿಗಳನ್ನು ಮುಂದಿನ ತಲೆಮಾರಿಗೆ ಸಾಗಿಸಬೇಕು. ಹಾಗೆ ಸಾಗಿಸಲಿಲ್ಲವೆಂದರೆ ಅವರಿಗ ಋಣಮುಕ್ತಿಯಿಲ್ಲ ಎನ್ನುವ ನಂಬಿಕೆಯಿದೆ.

ಆಯುರ್ವೇದವು ಮಕ್ಕಳಿಲ್ಲದ ಸ್ಥಿತಿಯನ್ನು ವಂಧ್ಯತ್ವ ಎಂದು ಕರೆದಿದೆ. ಮಕ್ಕಳಾಗ ಬೇಕಾದರೆ ನಾಲ್ಕು ಗರ್ಭ ಸಂಭವ ಸಾಮಾಗ್ರಿಗಳು ಅಗತ್ಯ. ಮೊದಲನೆಯದು ಋತು. ಒಂದು ಬೀಜವು ಮೊಳೆಯಬೇಕಾದರೆ ಅದಕ್ಕೆ ಅನುಕೂಲಕರ ಋತು ಅಗತ್ಯ. ಎಲ್ಲ ಋತುಗಳಲ್ಲೂ ಬೀಜ ಮೊಳೆಯದು. ಹಾಗಾಗಿ ಮಕ್ಕಳಾಗಲೂ ಫಲವಂತಿಕೆಯ ಅವಧಿ (ಫರ್ಟೈಲ್ ವಿಂಡೋ) ಎನ್ನುವುದು ಇರುತ್ತದೆ.

ಎರಡನೆಯದು ಕ್ಷೇತ್ರ. ಅಂದರೆ ಗರ್ಭಾಶಯ. ಒಂದು ಸಸಿ ಮೊಳೆಯಬೇಕಾದರೆ ಹೇಗೆ ಮಣ್ಣು ಫಲವತ್ತಾಗಿ ಇರಬೇಕೋ, ಹಾಗೆಯೇ ಗರ್ಭಾಶಯವೂ ಎಲ್ಲ ರೀತಿಯ ಅನಾರೋಗ್ಯಗಳಿಂದ ಮುಕ್ತವಾಗಿರಬೇಕು. ಮೂರನೆಯದು ಅಂಬು. ಅಂಬು ನೀರನ್ನು ಒಳಗೊಂಡಂತೆ ಎಲ್ಲ ಪೋಷಕಾಂಶಗಳು. ಈ ಶೀರ್ಷಿಕೆಯ ವ್ಯಾಪ್ತಿಯಲ್ಲಿ ಹಾರ್ಮೋನುಗಳೂ ಬರುತ್ತವೆ. ರಕ್ತದಲ್ಲಿರುವ ಪ್ಲಾಸ್ಮಾದ ಮೂಲಕ ಎಲ್ಲ ಪೋಷಕಾಂಶಗಳ ಪೂರೈಕೆಯಾಗುತ್ತದೆ.

ನಾಲ್ಕನೆಯದು ಬೀಜ. ಬೀಜ ಎಂದರೆ ಇದು ಅಂಡಾಣು (ಓವಮ್) ಮತ್ತು ವೀರ್ಯಾಣು ಗಳನ್ನು (ಸ್ಪರ್ಮ್) ಸೂಚಿಸುತ್ತದೆ. ಎರಡೂ ಶುದ್ಧವಾಗಿರಬೇಕು ಹಾಗೂ ಪರಿಪೂರ್ಣ ಓಜಸ್ಸಿನಿಂದ (ಜೀವಶಕ್ತಿ ಹಾಗೂ ಚೈತನ್ಯ) ಕೂಡಿರಬೇಕು. ಈ ನಾಲ್ಕು ಗರ್ಭ ಸಂಭವ ಸಾಮಾಗ್ರಿಗಳಲ್ಲಿ, ಯಾವುದಾದರೊಂದು ಸಾಮಾಗ್ರಿಯು ದೋಷಯುಕ್ತವಾಗಿದ್ದರೆ, ಅವರಿಗೆ ಸಹಜ ಮಕ್ಕಳಾಗುವುದಿಲ್ಲ ಎನ್ನುವುದನ್ನು ಆಯುರ್ವೇದ ಸ್ಪಷ್ಟವಾಗಿ ಹೇಳುತ್ತದೆ. ಇದೇ ಆಶಯವನ್ನು ಆಧುನಿಕ ವೈದ್ಯಕೀಯ ವಿಜ್ಞಾನವು ವ್ಯಕ್ತಪಡಿಸುತ್ತದೆ.

**ಬಂಜೆಂಬ ಶಬುದ:** ನಮ್ಮ ದೇಶದ ಒಟ್ಟು ದಂಪತಿಗಳಲ್ಲಿ ಶೇ.10-15ರಷ್ಟು ದಂಪತಿಗಳಿಗೆ ಸಂತಾನಭಾಗ್ಯವಿಲ್ಲ. ಅಂದರೆ 27.5-30 ದಶಲಕ್ಷ ದಂಪತಿಗಳಿಗೆ ಮಕ್ಕಳಿಲ್ಲ. ಮಕ್ಕಳಾಗದಿರಲು ಕಾರಣಗಳು ಶೇ.30-40ರಷ್ಟು ಗಂಡಸರಲ್ಲೂ ಹಾಗೂ ಶೇ. 30-40ರಷ್ಟು ಹೆಂಗಸರಲ್ಲೂ ಇರುತ್ತವೆ. ಶೇ. 20-30ರಷ್ಟು ಪ್ರಕರಣಗಳಲ್ಲಿ ಮಿಶ್ರ ಅಥವಾ ಅವ್ಯಕ್ತ ಕಾರಣಗಳಿರುತ್ತವೆ. ಇಂಥವರಿಗೆ ಸಂಜೀವಿನಿಯಂತೆ ದೊರೆತಿದೆ ಪ್ರನಾಳ ತಂತ್ರಜ್ಞಾನ ಅಥವ ಕೃತಕ ಗರ್ಭಧಾರಣಾ ಚಿಕಿತ್ಸೆ (ಐವಿಎಫ್- ಇನ್ ವಿಟ್ರೊ ಫರ್ಟಿಲೈಜೇಷನ್). ಈ ತಂತ್ರಜ್ಞಾನವು ಮನುಕುಲಕ್ಕೆ ಲಭ್ಯವಾದ ಇತಿಹಾಸದ ಬಗ್ಗೆ ಒಂದು ಸಂಕ್ಷಿಪ್ತ ಪಕ್ಷಿನೋಟವನ್ನು ಹರಿಸೋಣ.

**ಲೂಯೀಸ್ ಜಾಯ್ ಬ್ರೌನ್:** 1978ರ ಜುಲೈ 25. ರಾತ್ರಿ 11 ಗಂಟೆ 47 ನಿಮಿಷ. ಇಂಗ್ಲೆಂಡ್, ಓಲ್ಡ್‌ಹ್ಯಾಮ್, ಮಿಲ್‌ಟೌನಿನ ಜಿಲ್ಲಾ ಆಸ್ಪತ್ರೆ. ಮಗುವಿನ ಅಳುವಿಗಾಗಿ ಎಲ್ಲರೂ ಕಾದಿದ್ದರು. ನಡುರಾತ್ರಿಯಲ್ಲಿ ಮಗುವಿನ ಚೀತ್ಕಾರವು ಆಸ್ಪತ್ರೆಯ ಅಂಗಳದಲ್ಲಿ ಪ್ರತಿಧ್ವನಿಸುತ್ತಿರುವಂತೆಯೇ ಎಲ್ಲರ ಮುಖಗಳಲ್ಲಿ ಸಂತೋಷವು ಕಾಣಿಸಿಕೊಳ್ಳುವುದರ ಜತೆಯಲ್ಲಿ ಸದ್ದಿಲ್ಲದೆ ಒಂದು ಜಾಗತಿಕ ದಾಖಲೆಯೂ ಸ್ಥಾಪನೆಯಾಯಿತು.


ಜಗತ್ತಿನಲ್ಲಿ ಮೊತ್ತ ಮೊದಲ ಬಾರಿಗೆ ತಾಯಿಯ ಬೆಚ್ಚನೆಯ ಗರ್ಭದಲ್ಲಿ ಅಂಕುರ ವೊಡೆಯದೆ, ಪ್ರಯೋ ಗಾಲಯದ ತಣ್ಣನೆಯ ಗಾಜಿನ ತಟ್ಟೆಯಲ್ಲಿ ಗರ್ಭಕಟ್ಟಿ, ಈಗ ಪೂರ್ಣರೂಪದ ಮಗುವು ಬೆಳೆದು, ಈಗಷ್ಟೇ ಅದರ ಸಿಸೇರಿಯನ್ ಪ್ರಸವದ ಮೂಲಕ ಜಗತ್ತಿಗೆ ಬಂದಿತ್ತು. ಈ ಒಂದು ಘಟನೆಯು ವೈದ್ಯಕೀಯ ಇತಿಹಾಸಕ್ಕೇ ಮಹಾತಿರುವನ್ನು ಕೊಟ್ಟಿತು!

ಪ್ರಜನನ ವಿಜ್ಞಾನ ಅಥವಾ ರಿ-ಪ್ರೊಡಕ್ಟಿವ್ ಮೆಡಿಸಿನ್ ಹಿಂದೆಂದೂ ಕಾಣದಂಥ ಚಿಮ್ಮು ಹಲಗೆಯನ್ನು ಏರಿ, ಲಕ್ಷಾಂತರ ತಾಯಂದಿರನ್ನು ಬಂಜೆ ಎಂಬ ಶಬ್ದದಿಂದ ಮುಕ್ತಿಯನ್ನು ನೀಡಿತು. ಬಾಲಕರಿಲ್ಲದ ಬಾಲೀದ್ಯಾತರ ಜನ್ಮ, ಬಾಳೆಲೆ ಹಾಸ್ಯುಂಡು ಬೀಸಿ ಒಗೆದಂಗ ಎಂದು ಹೆಣ್ಣಿನ ಜೀವವನ್ನೇ ಅವಹೇಳನ ಮಾಡುತ್ತಿದ್ದ ಈ ಸಮಾಜಕ್ಕೆ, ಮೊದಲ ಬಾರಿಗೆ ಬೀಯಿಗೆ ಬೀಗವನ್ನು ಹಾಕಿಕೊಳ್ಳುವಂತೆ ಮಾಡಿತು.

**ದಂಪತಿಗಳು:** ಒಂದು ಮಗುವನ್ನು ಹಡೆದರೆ ಮಾತ್ರ ಹೆಣ್ಣಿನ ಜೀವನವು ಸಾರ್ಥಕತೆಯನ್ನು ಪಡೆಯಲು ಸಾಧ್ಯ ಎಂಬ ನಂಬಿಕೆಯು ಇಂಗ್ಲೆಂಡಿನಲ್ಲೂ ಇತ್ತು. ಬ್ರಿಟನ್ನಿನ ಬ್ರಿಸ್ಟಲ್ ನಗರದಲ್ಲಿ ಲೆಸ್ಲಿ ಬ್ರೌನ್ ಮತ್ತು ಜಾನ್ ಬ್ರೌನ್ ಎಂಬ ದಂಪತಿಗಳು. ಜಾನ್ ಬ್ರಿಟಿಷ್ ರೈಲ್ವೆಯಲ್ಲಿ ಟ್ರಕ್ ಚಾಲಕನಾಗಿ ಕೆಲಸವನ್ನು ಮಾಡುತ್ತಿದ್ದ. ಅವರು ಮದುವೆಯಾಗಿ ಒಂಬತ್ತು ವರ್ಷಗಳಾಗಿದ್ದವು. ಆದರೂ ಅವರಿಗೆ ಮಕ್ಕಳಾಗಿರಲಿಲ್ಲ. ಈ ಕೊರಗು ಇಬ್ಬರನ್ನೂ ತೀವ್ರವಾಗಿ ಕಾಡುತ್ತಿತ್ತು. ಲೆಸ್ಲಿ ಬ್ರೌನ್‌ಳ ಗರ್ಭನಾಳಗಳಲ್ಲಿ ತಡೆಯಿದ್ದ ಕಾರಣ, ವೀರ್ಯಾಣುವು ಅಂಡಾಣುವಿನೊಡನೆ ಮಿಲನವಾಗುವ ಸಂದರ್ಭವೇ ಬರುತ್ತಿರಲಿಲ್ಲ. ಹಾಗಾಗಿ ಕ್ಷೇತ್ರದೋಷದ ಕಾರಣ ಅವರಿಗೆ ಮಕ್ಕಳಾಗಿರಲಿಲ್ಲ.

1976. ಓಲ್ಡ್‌ಹ್ಯಾಮ್ ನಗರದಲ್ಲಿ ಪ್ಯಾಟ್ರಿಕ್ ಸ್ಟೆಪ್‌ಟೋ (1913-1988) ಎಂಬ ಪ್ರಸೂತಿತಂತ್ರ ವೈದ್ಯರಿದ್ದರು. ಆತನನ್ನು ಭೇಟಿಯಾಗುವಂತೆ ಲೆಸ್ಲಿಗೆ ಯಾರೋ ಸೂಚಿಸಿದರು. ಪ್ಯಾಟ್ರಿಕ್, ರಾಬರ್ಟ್ ಎಡ್ವರ್ಡ್ಸ್ (1925-2013) ಎಂಬ ಅಂಗಕ್ರಿಯಾ ವಿಜ್ಞಾನಿ ಹಾಗೂ ಜೀನ್ ಪರ್ಡಿ (1945-1985) ಎಂಬ ನರ್ಸ್-ಭ್ರೂಣತ ಜ್ಞಳ ಜತೆಯಲ್ಲಿ ಸುಮಾರು ದಶಕಗಳಿಂದ ಪ್ರನಾಳ ಶಿಶು (ಕೃತಕ ಗರ್ಭಧಾರಣೆ) ಪ್ರಯೋಗಗಳಲ್ಲಿ ತೊಡಗಿದ್ದರು. ಆದರೂ ಅವರಿಗೆ ಯಶಸ್ಸು ದೊರೆತಿರಲಿಲ್ಲ. ಈ ಬಗ್ಗೆ ಅವರಿಗೆ ನಿರಾಸೆಯಾಗಿದ್ದರೂ, ಭರವಸೆಯನ್ನು ಕಳೆದುಕೊಂಡಿರಲಿಲ್ಲ.

ತಮ್ಮ ಪ್ರಯೋಗಗಳನ್ನು ನಿಷ್ಠೆಯಿಂದ ನಡೆಸುತ್ತಿದ್ದರು. ಈ ಪ್ರಯೋಗದಲ್ಲಿ ಭಾಗಿಯಾಗಲು ಲೆಸ್ಲಿ ಒಪ್ಪಿಗೆ ಪತ್ರಕ್ಕೆ ಸಹಿಯನ್ನು ಹಾಕಿದಳು. ತಾನೊಂದು ಪ್ರಯೋಗದಲ್ಲಿ ಪಾಲುಗೊಳ್ಳುತ್ತಿದ್ದೇನೆ. ಈ ರೀತಿಯ ಪ್ರಯೋಗದ ಮೂಲಕ ಇದುವರೆಗೂ ಒಂದು ಮಗುವೂ ಹುಟ್ಟಿಲ್ಲ. ಒಂದು ವೇಳೆ ಈ ಪ್ರಯೋಗವು ಯಶಸ್ವಿಯಾದರೆ, ಇಡೀ ಜಗತ್ತಿನಲ್ಲಿ ಪ್ರನಾಳ ಶಿಶುವನ್ನು ಪಡೆದ ಮೊದಲ ತಾಯಿ ತಾನಾಗಲಿದ್ದೇನೆ ಎಂಬ ಕಲ್ಪನೆಯೂ ಆಕೆಗೆ ಇರಲಿಲ್ಲ.




**ತ್ರಿಮೂರ್ತಿಗಳು:** ಪ್ಯಾಟ್ರಿಕ್ ಸ್ಟೆಪ್‌ಟೋ ಉದರದರ್ಶಕ ಶಸ್ತ್ರಚಿಕಿತ್ಸೆಯಲ್ಲಿ ತಜ್ಞರಾಗಿದ್ದರು. ಅಂದಿನ ದಿನಗಳಲ್ಲಿ ಅನೇಕ ವೈದ್ಯರು ಉದರದರ್ಶಕವು ಒಂದು ಅಪಾಯಕಾರಿ ಆಟಿಕೆ, ಅದರ ಸಹವಾಸವೇ ಬೇಡ ಎಂದು ಸುಮ್ಮನಿದ್ದರು. ರಾಬರ್ಟ್ ಎಡ್ವರ್ಡ್ ಅಂಗಕ್ರಿಯಾ ವಿಜ್ಞಾನಿಯಾಗಿದ್ದರು. ತಾವು ಭಾಗಿಯಾಗಿರುವ ಪ್ರಯೋಗದಲ್ಲಿ ಅಪಾರ ಭರವಸೆಯನ್ನು ಪಡೆದಿದ್ದರು. ಸ್ತ್ರೀಯರ ಒಡಲಿನಿಂದ ಪ್ರತ್ಯೇಕಿಸಿದ ಅಂಡಾಣುವನ್ನು, ಪ್ರಯೋಗಾಲಯದ ಪರಿಸರದಲ್ಲಿ ಹೇಗೆ ಆರೋಗ್ಯಕರವಾಗಿ ಬೆಳೆಸಬೇಕು ಎನ್ನುವ ಕ್ಷೇತ್ರದಲ್ಲಿ ಪರಿಣತಿಯನ್ನು ಪಡೆದಿದ್ದರು. ಜೀನ್ ಪರ್ಡಿ ಜಗತ್ತಿನ ಮೊದಲ ಭ್ರೂಣವಿಜ್ಞಾನಿ. ತನ್ನ ಪುಟ್ಟ ಪ್ರಯೋಗಾಲಯದಲ್ಲಿ ನೂರಾರು ಗಂಟೆಗಳ ಕಾಲ ಜೀವಕೋಶಗಳ ದ್ವಿಗುಣಗೊಳ್ಳುವಿಕೆಯನ್ನು ನೋಡಿ ಅಪಾರ ಅನುಭವವನ್ನು ಪಡೆದ ಹೆಣ್ಣು ಮಗಳಾಗಿದ್ದಳು. ಈ ತ್ರಿಮೂರ್ತಿಗಳಿಗೆ ಮೂರು ರೀತಿಯ ತೊಂದರೆಗಳು ಕಾಡುತ್ತಿದ್ದವು. ಮೊದಲನೆಯದಾಗಿ ಸರಕಾರವು ಪ್ರನಾಳ ಶಿಶುವಿನ ಯಾವ ಪ್ರಯೋಗಗಳಿಗೂ ಹಣಕಾಸಿನ ನೆರವನ್ನು ನೀಡುವುದಿಲ್ಲ ಎಂದು ಘೋಷಿಸಿತ್ತು.

ಎರಡನೆಯದಾಗಿ ಸಮಾಜದಿಂದ ಬಂಧ ಪ್ರತಿರೋಧ. ನೀವೇ ದೇವರು ಆಗಲು ಹೊರಟಿದ್ದೀರಿ. ಅದು ಅಸಾಧ್ಯವಾದದ್ದರಿಂದ ನೀವು ದೆವ್ವವನ್ನು (ಫ್ರಾಂಕೆನ್‌ಸ್ಟೀನ್) ಸೃಜಿಸುವುದು ಖಚಿತ ಎಂದು ಮೂದಲಿಸಿದರು. ಮೂರನೆಯದಾಗಿ ದೊಡ್ಡ ಆಸ್ಪತ್ರೆಗಳ ಆಡಳಿತ ವರ್ಗದವರ ಹಾಗೂ ಈ ಕ್ಷೇತ್ರದ ಹಿರಿಯ ವೈದ್ಯರು ಇವರಿಗೆ ತಾಂತ್ರಿಕ ಸಹಕಾರವನ್ನು ಬಿಡಿ, ಸಹಾನುಭೂತಿಯನ್ನೂ ತೋರಲಿಲ್ಲ. ಹಾಗಾಗಿ ಮೂವರು ಯಾವುದೇ ಒಂದು ಅನುಕೂಲತೆಗಳಿಲ್ಲದ, ಹಣಕಾಸಿನ ಕೊರತೆ ಸದಾ ಕಾಡುತ್ತಿದ್ದ, ಅನಾಮಧೇಯ ಆಸ್ಪತ್ರೆಯಲ್ಲಿ ತಮ್ಮ ಪ್ರಯೋಗಗಳನ್ನು ನಡೆಸುತ್ತಿದ್ದರು.

**ಪವಾಡ:** 1977ರ ನವೆಂಬರ್ 10. ಲೆಸ್ಲಿಯ ಉದರದಲ್ಲಿ ರಂಧ್ರವನ್ನು ಕೊರೆದು, ಉದರ ದರ್ಶಕವನ್ನು ಆ ರಂಧ್ರದಲ್ಲಿ ತೂರಿಸಿ, ಲೆಸ್ಲಿ ಬ್ರೌನಳ ಒಂದೇ ಒಂದು ಅಂಡಾಣುವನ್ನು ಪ್ರತ್ಯೇಕಿಸಿದರು. ಆ ಅಂಡಾಣುವನ್ನು ಗಾಜಿನ ತಟ್ಟೆಯಲ್ಲಿಟ್ಟರು. ರಾಬರ್ಟ್ ಎಡ್ವರ್ಡ್ಸ್ ಆ ಗಾಜಿನ ತಟ್ಟೆಯೊಳಗೆ ಜಾನ್‌ನ ವೀರ್ಯವನ್ನು ಸೇರಿಸಿದರು. ಎರಡು ದಿನಗಳಾದವು. ಸೂಕ್ಷ್ಮದರ್ಶಕದಲ್ಲಿ ನೋಡಿದರು. ಅಂಡಾಣು-ವೀರ್ಯಾಣುಗಳೆರಡೂ ಸೇರಿ ಗರ್ಭವನ್ನು ಕಟ್ಟಿದ್ದವು. ಅಷ್ಟು ಮಾತ್ರವಲ್ಲ, ಅವು ನಿಗದಿತ ಅವಧಿಗೆ ಅನುಗುಣವಾಗಿ ದ್ವಿವಿಭಜನೆ ಗೊಂಡು ಎಂಟು ಜೀವಕೋಶಗಳ ಒಂದು ಎಳೇ ಎಳೇ ಭಾವಿ ಭ್ರೂಣಕ್ಕೆ ನಾಂದಿಯನ್ನು ಹಾಡಿದ್ದವು. ಅದನ್ನು ಎಚ್ಚರಿಕೆಯಿಂದ ಎತ್ತಿಕೊಂಡು, ಅದನ್ನು ಲೆಸ್ಲಿಯ ಗರ್ಭಾಶಯದ ಮೆತ್ತೆಯಲ್ಲಿ ಮಲಗಿಸಿದರು. ಆ ಎಳೇ ಎಳೇ ಭಾವಿ ಭ್ರೂಣವು ನಿಧಾನವಾಗಿ ಗರ್ಭಾಶಯದ ಮೆತ್ತೆಯಲ್ಲಿ ನಾಟಿಕೊಂಡಿತು.

ಒಂದಷ್ಟು ದಿನಗಳಾದ ಮೇಲೆ ಗರ್ಭಧಾರಣಾ ಪರೀಕ್ಷೆಯನ್ನು (ಪ್ರೆಗ್ನನ್ಸಿ ಟೆಸ್ಟ್) ಮಾಡಿದರು. ಇತ್ಯಾತ್ಮಕ ಫಲಿತಾಂಶವು ಬಂದಿತು. ಅಂದರೆ ಗರ್ಭ ಕಟ್ಟಿದೆ ಎನ್ನುವುದಕ್ಕೆ ಪುರಾವೆಯು ದೊರೆಯಿತು. ಈ ಸುದ್ದಿಯು ಅದು ಹೇಗೋ ಆಸ್ಪತ್ರೆಯ ಗೋಡೆಗಳಿಂದ ಹೊರಗೆ ಹರಡಿತ್ತು. ಜಗತ್ತಿನ ಎಲ್ಲ ಮಾಧ್ಯಮಗಳು ಒಮ್ಮೆಲೇ ಓಲ್ಡ್ ಹ್ಯಾಮ್ ಜನರಲ್ ಹಾಸ್ಪಿಟಲ್ ಮೇಲೆ ಮುಗಿಬಿದ್ದವು. ಈಗ ನಿಜವಾದ ಸಮಸ್ಯೆಯು ಆರಂಭವಾಯಿತು. ಮಾಧ್ಯಮದವರ ಉಪಟಳವನ್ನು ಸಹಿಸಲಾಗದೆ ಆಸ್ಪತ್ರೆಯವರು ಪೊಲೀಸರ ನೆರವನ್ನು ಪಡೆದರು. ದೇವರೇ ಆಗಲು ಹೊರಟ ಪಾಖಂಡಿಗಳ ಆಸ್ಪತ್ರೆಯ ಮೇಲೆ ಬಾಂಬ್ ಹಾಕಿ ನೆಲಸಮ ಮಾಡುತ್ತೇವೆ ಎಂಬ ಬೆದರಿಕೆಯ ಕರೆಗಳು ಬಂದವು. ಪಾಪರಾಜಿಗಳ (ಪ್ರಖ್ಯಾತ ಜನರ ಛಾಯಾಚಿತ್ರವನ್ನು ತೆಗೆದು ಹೆಚ್ಚಿನ ಬೆಲೆಗೆ ಪತ್ರಿಕೆಗಳಿಗೆ ಮಾರಾಟ ಮಾಡಲು ತುದಿಗಾಲಲ್ಲಿ ನಿಂತಿರುವ ಖಾಸಗಿ ಛಾಯಾಗ್ರಾಹಕರು) ಕಾಟವನ್ನು ತಡೆಯುವುದು ಒಂದು ದೊಡ್ಡ ಸವಾಲಾಗಿತ್ತು.

1978ರ ಜುಲೈ 25ರಂದು ರಾತ್ರಿ 11.47 ನಿಮಿಷಗಳಿಗೆ ಲೆಸ್ಲಿಯ ಉದರವನ್ನು ಛೇದಿಸಿ, ಸಿಸೇರಿಯನ್ ಮೂಲಕ ಪ್ರಸವ ಮಾಡಿಸಿದರು. ವೈದ್ಯರು ಇಡೀ ಪ್ರಸವ ಪ್ರಕ್ರಿಯೆಯನ್ನು ಚಿತ್ರೀಕರಿಸಿದರು. ಪ್ರನಾಳ ಶಿಶುವಿನ ತಂತ್ರಜ್ಞಾನದ ಮೂಲಕ ಆರೋಗ್ಯವಂತ ಶಿಶುವನ್ನು ಪಡೆಯಲು ಸಾಧ್ಯ ಎನ್ನುವುದನ್ನು ಜಗತ್ತಿಗೆ ತೋರಿಸಬೇಕಾಗಿತ್ತು. ಹಾಗಾಗಿ ಪ್ರಸವದ ಪ್ರತಿಯೊಂದು ಘಟ್ಟವನ್ನು ದಾಖಲಿಸಿದರು.

ಬ್ರೌನ್ ದಂಪತಿಗಳು ತಮ್ಮ ಮಗುವಿಗೆ ಲೂಯೀಸ್ ಜಾಯ್ ಬ್ರೌನ್ ಎಂಬ ಹೆಸರನ್ನು ನೀಡಿದರು. ಈಗ ಹೊಸ ಸಮಸ್ಯೆಯು ಉದ್ಭವವಾಯಿತು. ಎಲ್ಲರಿಗೂ ಮಗುವನ್ನು ನೋಡುವ,



- ಆಯುರ್ವೇದವು ಮಕ್ಕಳಿಲ್ಲದ ಸ್ಥಿತಿಯನ್ನು ವಂಧ್ಯತ್ವ ಎಂದು ಕರೆದಿದೆ. ಮಕ್ಕಳಾಗ ಬೇಕಾದರೆ ನಾಲ್ಕು ಗರ್ಭ ಸಂಭವ ಸಾಮಾಗ್ರಿಗಳು ಅಗತ್ಯ. ಮೊದಲನೆಯದು ಋತು. ಒಂದು ಬೀಜವು ಮೊಳೆಯಬೇಕಾದರೆ ಅದಕ್ಕೆ ಅನುಕೂಲಕರ ಋತು ಅಗತ್ಯ. ಎಲ್ಲ ಋತುಗಳಲ್ಲೂ ಬೀಜ ಮೊಳೆಯದು. ಹಾಗಾಗಿ ಮಕ್ಕಳಾಗಲೂ ಫಲವಂತಿಕೆಯ ಅವಧಿ (ಫರ್ಟೈಲ್ ವಿಂಡೋ) ಎನ್ನುವುದು ಇರುತ್ತದೆ.

### ಸೂಕ್ಷ್ಮ ದರ್ಶಕದಲ್ಲಿ ನೋಡಿದರು....

- ಅಂಡಾಣು-ವೀರ್ಯಾಣುಗಳೆರಡೂ ಸೇರಿ ಗರ್ಭವನ್ನು ಕಟ್ಟಿದ್ದವು.
- ಅಷ್ಟು ಮಾತ್ರವಲ್ಲ, ಅವು ನಿಗದಿತ ಅವಧಿಗೆ ಅನುಗುಣವಾಗಿ ದ್ವಿವಿಭಜನೆ ಗೊಂಡು ಎಂಟು ಜೀವಕೋಶಗಳ ಒಂದು ಎಳೇ ಎಳೇ ಭಾವಿ ಭ್ರೂಣಕ್ಕೆ ನಾಂದಿಯನ್ನು ಹಾಡಿದ್ದವು.
- ಅದನ್ನು ಎಚ್ಚರಿಕೆಯಿಂದ ಎತ್ತಿಕೊಂಡು, ಅದನ್ನು ಲೆಸ್ಲಿಯ ಗರ್ಭಾಶಯದ ಮೆತ್ತೆಯಲ್ಲಿ ಮಲಗಿಸಿದರು.
- ಆ ಎಳೇ ಎಳೇ ಭಾವಿ ಭ್ರೂಣವು ನಿಧಾನವಾಗಿ ಗರ್ಭಾಶಯದ ಮೆತ್ತೆಯಲ್ಲಿ ನಾಟಿಕೊಂಡಿತು.
- ಒಂದಷ್ಟು ದಿನಗಳಾದ ಮೇಲೆ ಗರ್ಭಧಾರಣಾ ಪರೀಕ್ಷೆಯನ್ನು (ಪ್ರೆಗ್ನನ್ಸಿ ಟೆಸ್ಟ್) ಮಾಡಿದರು.
- ಇತ್ಯಾತ್ಮಕ ಫಲಿತಾಂಶವು ಬಂದಿತು. ಅಂದರೆ ಗರ್ಭ ಕಟ್ಟಿದೆ ಎನ್ನುವುದಕ್ಕೆ ಪುರಾವೆಯು ದೊರೆಯಿತು.
- ಈ ಸುದ್ದಿಯು ಅದು ಹೇಗೋ ಆಸ್ಪತ್ರೆಯ ಗೋಡೆಗಳಿಂದ ಹೊರಗೆ ಹರಡಿತ್ತು.
- ಜಗತ್ತಿನ ಎಲ್ಲ ಮಾಧ್ಯಮಗಳು ಒಮ್ಮೆಲೇ ಓಲ್ಡ್ ಹ್ಯಾಮ್ ಜನರಲ್ ಹಾಸ್ಪಿಟಲ್ ಮೇಲೆ ಮುಗಿಬಿದ್ದವು.
- ಈಗ ನಿಜವಾದ ಸಮಸ್ಯೆಯು ಆರಂಭವಾಯಿತು.
- ಮಾಧ್ಯಮದವರ ಉಪಟಳವನ್ನು ಸಹಿಸಲಾಗದೆ ಆಸ್ಪತ್ರೆಯವರು ಪೊಲೀಸರ ನೆರವನ್ನು ಪಡೆದರು.
- ದೇವರೇ ಆಗಲು ಹೊರಟ ಪಾಖಂಡಿಗಳ ಆಸ್ಪತ್ರೆಯ ಮೇಲೆ ಬಾಂಬ್ ಹಾಕಿ ನೆಲಸಮ ಮಾಡುತ್ತೇವೆ ಎಂಬ ಬೆದರಿಕೆಯ ಕರೆಗಳು ಬಂದವು.
- ಪಾಪರಾಜಿಗಳ (ಪ್ರಖ್ಯಾತ ಜನರ ಛಾಯಾಚಿತ್ರವನ್ನು ತೆಗೆದು ಹೆಚ್ಚಿನ ಬೆಲೆಗೆ ಪತ್ರಿಕೆಗಳಿಗೆ ಮಾರಾಟ ಮಾಡಲು ತುದಿಗಾಲಲ್ಲಿ ನಿಂತಿರುವ ಖಾಸಗಿ ಛಾಯಾಗ್ರಾಹಕರು) ಕಾಟವನ್ನು ತಡೆಯುವುದು ಒಂದು ದೊಡ್ಡ ಸವಾಲಾಗಿತ್ತು.

ಮಾತನಾಡಿಸುವ, ಎತ್ತಿ ಮುದ್ದಾಡುವ ಆಸೆ. ಇದು ಕಿರಿಕಿರಿಯ ಮಟ್ಟವನ್ನು ತಲುಪಿದಾಗ, ಬ್ರೌನ್ ಕುಟುಂಬಕ್ಕೆ ಖಾಸಗಿ ಕ್ಷಣಗಳೇ ಇಲ್ಲದಂತಾದವು.

ಮತ್ತೊಂದು ಕಡೆಯಿಂದ ಬ್ರೌನ್ ದಂಪತಿಗಳಿಗೆ ಅವಹೇಳನಕಾರಿ ಪತ್ರಗಳು, ಟೆಲಿಫೋನ್ ಕರೆಗಳು, ಗಾಜಿನ ಚೂರುಗಳ, ಪ್ಲಾಸ್ಟಿಕ್ ಭ್ರೂಣಗಳ ಪಾರ್ಸೆಲ್ಲುಗಳು ಬರಲಾರಂಭಿಸಿದವು. ಲೂಯೀಸ್ ಬ್ರೌನ್ ಆತ್ಮರಹಿತಳಾಗಿ ಹುಟ್ಟಿದ್ದಾಳೆ ಎಂಬ ಸುದ್ಧಿಯು ದೊಡ್ಡ ಪ್ರಮಾಣದಲ್ಲಿ ಹರಡಿತು.

**ಉತ್ತರ ದೊರೆಯಿತು:** ಲೂಯೀಸ್ ಬ್ರೌನ್ ಸಹಜ ಮಗುವಲ್ಲ ಎನ್ನುವ ನಾನಾ ಕ್ಯಾತೆಗಳಿಗೆ ವೈಜ್ಞಾನಿಕ ಉತ್ತರವನ್ನು ನೀಡುವ ದಿನವೂ ಬಂದಿತು. ಬ್ರೌನ್ ದಂಪತಿಗಳು ಎರಡನೆಯ ಸಲ ಪ್ರನಾಳಶಿಶು ತಂತ್ರಜ್ಞಾನದ ಮೂಲಕ ಮತ್ತೊಂದು ಹೆಣ್ಣುಮಗು, ನಟಾಲಿಯನ್ನು ಪಡೆದರು. ನಟಾಲಿಯು ದೊಡ್ಡವಳಾಗಿ, ಸಹಜ ರೀತಿಯಲ್ಲಿ ಮಗುವೊಂದಕ್ಕೆ ಜನ್ಮವನ್ನು ನೀಡಿ, ಪ್ರನಾಳ ಶಿಶುವಿನ ತಂತ್ರಜ್ಞಾನದಿಂದ ಆರೋಗ್ಯವಂತ ಮಕ್ಕಳು ಹುಟ್ಟುತ್ತಾರೆ ಎನ್ನುವುದಕ್ಕೆ ಪುರಾವೆಯನ್ನು ಒದಗಿಸಿದಳು.

ನಂತರ 2006ರಲ್ಲಿ ಲೂಯೀಸ್ ಬ್ರೌನ್, ಯಾವುದೇ ವೈದ್ಯಕೀಯ ತಂತ್ರಜ್ಞಾನದ ನೆರವಿಲ್ಲದೆ ನೈಜವಾಗಿ ಕ್ಯಾಮೆರೂನ್ ಎಂಬ ಮಗುವಿಗೆ ಜನ್ಮವಿತ್ತಳು. ಇಂದು ಜಗತ್ತಿನಾದ್ಯಂತ ಕೃತಕ ಗರ್ಭಧಾರಣಾ ತಂತ್ರಜ್ಞಾನದ ಮೂಲಕ 12 ದಶಲಕ್ಷ ಮಕ್ಕಳು ಹುಟ್ಟಿದ್ದಾರೆ. ಬಂಜೆಂಬ ಶಬುದದಿಂದ ಮುಕ್ತಿಯನ್ನು ಪಡೆದಿದ್ದಾರೆ. ಲೂಯೀಸ್ ಬ್ರೌನ್ ಬ್ರಿಸ್ಟಲ್ ನಗರದ ಶಿಪ್ಪಿಂಗ್ ಕಂಪನಿಯಲ್ಲಿ ಕ್ಲರ್ಕ್ ಆಗಿ ಕೆಲಸ ಮಾಡುತ್ತಿದ್ದಾಳೆ. ಈಗ ಆಕೆಗೆ 48 ವರ್ಷಗಳು.

**ಮಹಾ ದುರಂತ:** ಲೂಯೀಸ್ ಬ್ರೌನ್ ಹುಟ್ಟಿ, ಸರಿಯಾಗಿ 67 ದಿನಗಳ ನಂತರ, 1978ರ ಅಕ್ಟೋಬರ್ 3ರಂದು ಕನುಪ್ರಿಯ ಅಗರವಾಲ್ (ದುರ್ಗಾ) ಎಂಬ ಮಗುವು ಇದೇ ಕೃತಕ ಗರ್ಭಧಾರಣಾ ತಂತ್ರಜ್ಞಾನದ ಮೂಲಕ ಭಾರತದಲ್ಲಿ ಹುಟ್ಟಿತು. ಈ ತಂತ್ರಜ್ಞಾನವನ್ನು ಸ್ವತಂತ್ರವಾಗಿ ರೂಪಿಸಿ, ಮಗುವಿನ ಜನನಕ್ಕೆ ಕಾರಣರಾದವರು ಡಾ.ಸುಭಾಶ್ ಮುಖ್ಯೋಪಾಧ್ಯಾಯ (1931-1981) ಎಂಬ ವೈದ್ಯರು. ತಮ್ಮ ಪುಟ್ಟ ಅಪಾರ್ಟ್ಮೆಂಟಿನ ರೆಫ್ರಿಜರೇಟರನ್ನು ಬಳಸಿಕೊಂಡು ಈ ತಂತ್ರಜ್ಞಾನವನ್ನು ರೂಪಿಸಿಕೊಳ್ಳುವಲ್ಲಿ ಅವರು ಅನೇಕ ವಿಶ್ವದಾಖಲೆಗಳನ್ನು ಮಾಡಿದರು. ಇವರು ಅಂಡಾಶಯವು ಹೆಚ್ಚು ಹೆಚ್ಚು ಅಂಡಗಳನ್ನು ಉತ್ಪಾದಿಸುವಂತೆ ಪ್ರಚೋದನೆಯನ್ನು ನೀಡುವ ಗೊನಡೋಟ್ರೋಫಿನ್ನುಗಳನ್ನು ಮೊದಲ ಬಾರಿಗೆ ಬಳಸಿದರು. ಇವರು ಉದರ ದರ್ಶಕದ ಬದಲು ಯೋನಿ ಮುಖಾಂತರ ಅಂಡಾಣುಗಳನ್ನು ಸಂಗ್ರಹಿಸಿದರು. ಇದು ಕಡಿಮೆ ವೆಚ್ಚದ ಹಾಗೂ ಹೆಚ್ಚು ಸುರಕ್ಷತೆಯ ವಿಧಾನವಾಗಿದೆ.

ಇವರು 8 ಜೀವಕೋಶಗಳ ಎಳೇಭ್ರೂಣವನ್ನು ಕಾಪಾಡಲು ಶೀತಲಸಂರಕ್ಷಣೆ (ಕ್ರಯೋ ಪ್ರಿಸರ್ವೇಶನ್) ತಂತ್ರಜ್ಞಾನವನ್ನು ರೂಪಿಸಿದರು. ಅಗತ್ಯ ಬಿದ್ದಾಗ ಶೀತಲೀಕರಣಕ್ಕೆ ಒಳಗಾಗಿದ್ದ ಭ್ರೂಣವನ್ನು ಕೋಣೆಯ ಉಷ್ಣತೆಗೆ ತಂದು ಗರ್ಭಾಶಯದಲ್ಲಿ ನಾಟಿಸಬಹುದು ಎನ್ನುವುದನ್ನೂ ತೋರಿಸಿಕೊಟ್ಟರು.

ಮುಖೋಪಾಧ್ಯಾಯ ಅವರ ಬುದ್ಧಿವಂತಿಕೆ, ಪ್ರಯೋಗಶೀಲತೆ, ಸಂಶೋಧನಾ ಸಾಮರ್ಥ್ಯವನ್ನು ಕಂಡು ಕರುಬಿದ ಅವರ ಸಹುದ್ಯೋಗಿಗಳೇ, ಅವರ ಮೇಲೆ ಆರೋಪಗಳನ್ನು ಹೊರಿಸಿ, ಸರಕಾರಿ ವಿಚಾರಣೆಯು ನಡೆಯುವಂತೆ ಮಾಡಿದರು. ಜಗತ್ತಿನಲ್ಲಿ ಯಾರೂ ಮಾಡದೇ ಇರುವಂಥ ಸಂಶೋಧನೆಯನ್ನು ಸರಕಾರಿ ಕಾಲೇಜಿನ ವೈದ್ಯನೊಬ್ಬನು ಮಾಡುತ್ತಾನೆ ಎಂದರೆ ಅದು ನಂಬಲಸಾಧ್ಯ ಎಂದು ಅವಮಾನವನ್ನು ಮಾಡಿದರು. ಮುಖೋಪಾಧ್ಯಾಯ ಅವರು ಜೂನ್ 1981ರಲ್ಲಿ ಆತ್ಮಹತ್ಯೆ ಮಾಡಿಕೊಂಡರು.

20 ವರ್ಷಗಳ ನಂತರ, ಡಾ.ಟಿ.ಸಿ ಆನಂದಕುಮಾರ್ ಎಂಬ ವೈದ್ಯರು ಕೃತಕ ಗರ್ಭಧಾರಣಾ ತಂತ್ರಜ್ಞಾನದ ಮೂಲಕ, ಹರ್ಷ ಎನ್ನುವ ಭಾರತದ ಮೊದಲ ಪ್ರನಾಳಶಿಶುವಿನ ಜನನಕ್ಕೆ ಕಾರಣರಾದರು ಎನ್ನುವ ಸುದ್ಧಿಯು ಪತ್ರಿಕೆಗಳಲ್ಲಿ ಬಂದಿತು.

ಆದರೆ ಆನಂದಕುಮಾರ್ ಅವರು, ಮುಖೋಪಾಧ್ಯಾಯ ಅವರ ಕೈಬರಹದ ಟಿಪ್ಪಣಿಗಳನ್ನೆಲ್ಲ ಅಧ್ಯಯನ ಮಾಡಿ, ಅವರೇ ಭಾರತೀಯ ಕೃತಕ ಗರ್ಭಧಾರಣಾ ತಂತ್ರಜ್ಞಾನದ ಪಿತಾಮಹ ಎಂದು ಘೋಷಿಸಿದರು. ಮುಖೋಪಾಧ್ಯಾಯರ ಜೀವನ್ನು ಆಧರಿಸಿದ ಏಕ್ ಡಾಕ್ಟರ್ ಕಿ ಮೌತ್ ಎನ್ನುವ ಚಿತ್ರವು ಅಂತರ್ಜಾಲದಲ್ಲಿ ದೊರೆಯುತ್ತಿದೆ.

**- ಡಾ.ನಾ.** ಸೋಮೇಶ್ವರ

**ಪಪುವಾ ನ್ಯೂಗಿನಿಯಾ ದೇಶವು ಭಾಷಾವಿಜ್ಞಾನಿಗಳ ಪಾಲಿಗೆ ಒಂದು ಜೀವಂತ ಪ್ರಯೋಗಾಲಯ. ಇಲ್ಲಿನ ಜನಸಂಖ್ಯೆ ಕಡಿಮೆಯಿದ್ದರೂ, ಪ್ರತಿ 10000 ಜನರಿಗೆ ಒಂದು ಭಾಷೆ ಎಂಬಷ್ಟು ವೈವಿಧ್ಯತೆ ಇಲ್ಲಿದೆ. ಇದಕ್ಕೆ ಮುಖ್ಯವಾದ ಕಾರಣಗಳನ್ನು ನಾವು ಭೌಗೋಳಿಕ, ಸಾಮಾಜಿಕ ಮತ್ತು ಐತಿಹಾಸಿಕ ನೆಲೆಗಟ್ಟಿನಲ್ಲಿ ನೋಡಬಹುದು.**

# ಈ ದೇಶ ಭಾಷೆಗಳ ಮಹಾಸಂಗಮ

ಜಗತ್ತಿನಲ್ಲಿಯೇ ಅತಿ ಹೆಚ್ಚು ಭಾಷೆಗಳಿರುವ ದೇಶ ಅಂದ್ರೆ ಭಾರತ. ನೂರಾ ನಲವತ್ತು ಕೋಟಿ ಜನಸಂಖ್ಯೆ ಇರುವ ದೇಶದಲ್ಲಿ ಮೂರು ಸಾವಿರಕ್ಕೂ ಅಧಿಕ ಭಾಷೆಗಳಿವೆ. ಆದರೆ ಅಧಿಕೃತ ಭಾಷೆಗಳ ಸಂಖ್ಯೆ ಇಪ್ಪತ್ತೆರಡು. ಆದರೆ ಎಪ್ಪತ್ತಾರು ಲಕ್ಷ ಜನಸಂಖ್ಯೆ ಇರುವ ಪಪುವಾ ನ್ಯೂಗಿನಿಯಲ್ಲಿ ಸುಮಾರು 850 ಭಾಷೆಗಳಿವೆ.

ಪಪುವಾ ನ್ಯೂಗಿನಿಯಾದ ಈ ಭಾಷಾ ವೈವಿಧ್ಯ ಜಗತ್ತಿನ ಒಂದು ಅದ್ಭುತವೇ ಸರಿ. ಒಂದು ಸಣ್ಣ ದ್ವೀಪ ರಾಷ್ಟ್ರದಲ್ಲಿ ಇಷ್ಟೊಂದು ಭಾಷೆಗಳು ಹೇಗೆ ಹುಟ್ಟಿಕೊಂಡವು ಮತ್ತು ಇಂದಿಗೂ ಹೇಗೆ ಉಳಿದಿವೆ ಎಂಬುದು ಕುತೂಹಲದ ಸಂಗತಿಯೇ.

ಪಪುವಾ ನ್ಯೂಗಿನಿಯಾ ದೇಶವು ಭಾಷಾವಿಜ್ಞಾನಿಗಳ ಪಾಲಿಗೆ ಒಂದು ಜೀವಂತ ಪ್ರಯೋಗಾಲಯ. ಇಲ್ಲಿನ ಜನಸಂಖ್ಯೆ ಕಡಿಮೆಯಿದ್ದರೂ, ಪ್ರತಿ 10000 ಜನರಿಗೆ ಒಂದು ಭಾಷೆ ಎಂಬಷ್ಟು ವೈವಿಧ್ಯತೆ ಇಲ್ಲಿದೆ. ಇದಕ್ಕೆ ಮುಖ್ಯವಾದ ಕಾರಣಗಳನ್ನು ನಾವು ಭೌಗೋಳಿಕ, ಸಾಮಾಜಿಕ ಮತ್ತು ಐತಿಹಾಸಿಕ ನೆಲೆಗಟ್ಟಿನಲ್ಲಿ ನೋಡಬಹುದು.

ಭಾಷಾ ವೈವಿಧ್ಯಕ್ಕೆ ಪ್ರಮುಖ ಕಾರಣವೆಂದರೆ ಈ ದೇಶದ ಭೂವೈಜ್ಞಾನಿಕ ರಚನೆ. ಪಪುವಾ ನ್ಯೂಗಿನಿಯಾದ ಮಧ್ಯಭಾಗದಲ್ಲಿ ಎತ್ತರದ ಪರ್ವತ ಶ್ರೇಣಿಗಳಿವೆ. ಇವು ಅದೆಷ್ಟು ಕಡಿದಾಗಿವೆ ಎಂದರೆ, ಒಂದು ಕಣಿವೆಯಿಂದ ಇನ್ನೊಂದು ಕಣಿವೆಗೆ ಹೋಗುವುದು ಅಂದು ಅಸಾಧ್ಯವಾಗಿತ್ತು.

ಇಲ್ಲಿನ ಕಾಡುಗಳು ಅತೀ ದಟ್ಟವಾಗಿದ್ದು, ಸುಲಭವಾಗಿ ಸಂಚರಿಸಲು ದಾರಿಗಳಿರಲಿಲ್ಲ. ದೊಡ್ಡ ನದಿಗಳು ಮತ್ತು ಜೌಗು ಪ್ರದೇಶಗಳು ಜನಸಮೂಹವನ್ನು ಬೇರ್ಪಡಿಸಿದವು. ಈ ಭೌಗೋಳಿಕ ಅಡೆತಡೆಗಳಿಂದಾಗಿ, ಒಂದೇ ಪ್ರದೇಶದಲ್ಲಿ ವಾಸಿಸುವ ಗುಂಪುಗಳು ಸಾವಿರಾರು ವರ್ಷಗಳ ಕಾಲ ಪರಸ್ಪರ ಭೇಟಿಯಾಗದೇ ಪ್ರತ್ಯೇಕವಾಗಿಯೇ ಉಳಿದವು.

ಹೀಗೆ ಪ್ರತ್ಯೇಕಗೊಂಡ ಗುಂಪುಗಳು ಕಾಲಕ್ರಮೇಣ ತಮ್ಮದೇ ಆದ ವಿಭಿನ್ನ ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಸಿಕೊಂಡವು. ಮಾನವರು ಪಪುವಾ ನ್ಯೂಗಿನಿಯಾಕ್ಕೆ ಸುಮಾರು 40000 ದಿಂದ 50000 ವರ್ಷಗಳ ಹಿಂದೆಯೇ ಬಂದಿದ್ದಾರೆ ಎಂದು ಅಂದಾಜಿಸಲಾಗಿದೆ.

ಇಷ್ಟು ದೀರ್ಘಕಾಲದವರೆಗೆ ಮಾನವ ಸಮೂಹಗಳು ಪ್ರತ್ಯೇಕವಾಗಿ ನೆಲೆಸಿದ್ದರಿಂದ, ಮೂಲ ಭಾಷೆಗಳು ಅನೇಕ ಕವಲುಗಳಾಗಿ ಒಡೆದು ಹೊಸ ಭಾಷೆಗಳಾಗಿ ರೂಪಾಂತರ ಗೊಂಡವು. ಇದನ್ನು ಭಾಷಾ ವಿಜ್ಞಾನದಲ್ಲಿ ಭಾಷಾ ವಿಕಸನ ಎನ್ನಲಾಗುತ್ತದೆ.

ಇಲ್ಲಿನ ಜನರು ಸಣ್ಣ ಸಣ್ಣ ಬುಡಕಟ್ಟುಗಳಾಗಿ ವಾಸಿಸುತ್ತಿದ್ದರು. ಪ್ರತಿಯೊಂದು ಬುಡಕಟ್ಟು ಕೂಡ ತನ್ನದೇ ಆದ ಗುರುತನ್ನು ಹೊಂದಿರಲು ಇಷ್ಟಪಡುತ್ತಿತ್ತು. ಇಲ್ಲಿನ ಸಂಸ್ಕೃತಿಯಲ್ಲಿ ತಮ್ಮ ಬುಡಕಟ್ಟು ಮತ್ತು ಭಾಷೆಯೇ ಶ್ರೇಷ್ಠ ಎಂಬ ಭಾವನೆ ಇತ್ತು. ಅಕ್ಕಪಕ್ಕದ ಕಣಿವೆಗಳ ಜನರ ನಡುವೆ ಆಗಾಗ ಯುದ್ಧಗಳು ನಡೆಯುತ್ತಿದ್ದವು.

ಇದರಿಂದಾಗಿ ಅವರು ಪರಸ್ಪರ ಬೆರೆಯಲು ಹಿಂಜರಿಯುತ್ತಿದ್ದರು. ಸಂಪರ್ಕವಿಲ್ಲದಿಗ ಭಾಷೆಯೂ ಒಂದಾಗಲಿಲ್ಲ. ಪಪುವಾ ನ್ಯೂ ಗಿನಿಯಾದಲ್ಲಿ ಜನರು ಹಸಿರು ಕಣಿವೆಗಳಲ್ಲಿ ಕೃಷಿ ಮಾಡಿಕೊಂಡು ಸ್ವಾವಲಂಬಿಗಳಾಗಿದ್ದರು. ಆಹಾರಕ್ಕಾಗಿ ಅವರು ದೂರದ ಪ್ರದೇಶಗಳಿಗೆ ವಲಸೆ ಹೋಗುವ ಅಗತ್ಯವಿರಲಿಲ್ಲ.

ವಲಸೆ ಕಡಿಮೆ ಇದ್ದಷ್ಟೂ, ಬೇರೆ ಭಾಷೆಗಳೊಂದಿಗೆ ಬೆರೆಯುವ ಅವಕಾಶವೂ ಕಡಿಮೆ ಇರುತ್ತದೆ. ಇದು ಅವರವರ ಪ್ರಾದೇಶಿಕ ಭಾಷೆಗಳು ಅಳಿಯದಂತೆ ಉಳಿಯಲು ಸಹಾಯ ಮಾಡಿತು. ಆ ದೇಶದಲ್ಲಿರುವ ಭಾಷೆಗಳನ್ನು ಮುಖ್ಯವಾಗಿ ಎರಡು ವರ್ಗಗಳಾಗಿ ವಿಂಗಡಿಸಬಹುದು.

ಮೊದಲನೆಯದು, ಪಪುವನ್ ಭಾಷೆಗಳು. ಇವು ಅತ್ಯಂತ ಪುರಾತನ ಭಾಷೆಗಳು. ಇವುಗಳ ಮೂಲ ಸಾವಿರಾರು ವರ್ಷಗಳ ಹಿಂದಿನದು ಹಾಗೂ ಎರಡನೆಯದು, ಆಸ್ಟ್ರೋನೇಷಿಯನ್ ಭಾಷೆಗಳು. ಇವು ಸುಮಾರು 3500 ವರ್ಷಗಳ ಹಿಂದೆ ವಲಸೆ ಬಂದವರಿಂದ ಪರಿಚಯಿತವಾದವು.

ಇವು ಹೆಚ್ಚಾಗಿ ಕರಾವಳಿ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇಷ್ಟೊಂದು ಭಾಷೆಗಳಿರುವ ದೇಶದಲ್ಲಿ ಒಬ್ಬರಿಗೊಬ್ಬರು ಸಂವಹನ ನಡೆಸುವುದು ಹೇಗೆ ಎಂಬ ಪ್ರಶ್ನೆ ಕಾಡುವುದು ಸಹಜ. ಇದಕ್ಕಾಗಿ ಟೋಕ್ ಪಿಸಿನ್ ಎಂಬ ಲಿಂಗುವಾ ಫ್ರಾಂಕಾ ಅಥವಾ ಸಂಪರ್ಕ ಭಾಷೆ ಹುಟ್ಟಿಕೊಂಡಿತು. ಇದು ಇಂಗ್ಲಿಷ್ ಆಧಾರಿತ ಪಿಡ್ಜಿನ್ ಭಾಷೆಯಾಗಿದ್ದು, ಇಂದು ದೇಶದ ಬಹುತೇಕ ಜನರು ಇದನ್ನು ಬಳಸುತ್ತಾರೆ.

ಇದು ವಿವಿಧ ಬುಡಕಟ್ಟುಗಳ ನಡುವೆ ಸೇತುವೆಯಂತೆ ಕೆಲಸ ಮಾಡುತ್ತದೆ. ಪಪುವಾ ನ್ಯೂ ಗಿನಿಯಾದ ಭಾಷಾ ವೈವಿಧ್ಯತೆಯು ಮಾನವ ಇತಿಹಾಸದ ಒಂದು ಅಮೂಲ್ಯ ಆಸ್ತಿ. ಪ್ರಕೃತಿಯ ಅಡೆತಡೆಗಳು ಮತ್ತು ಜನರ ಪ್ರತ್ಯೇಕತೆಯ ಮನೋಭಾವವು ಇಲ್ಲಿನ ವೈವಿಧ್ಯವನ್ನು ಕಾಪಾಡಿವೆ. ಇಂದು ಜಾಗತೀಕರಣದಿಂದಾಗಿ ಕೆಲವು ಭಾಷೆಗಳು ಅಳಿವಿನ ಅಂಚಿನಲ್ಲಿದ್ದರೂ, ಈ ದೇಶವು ಇಂದಿಗೂ ಭಾಷೆಗಳ ಮಹಾ ಸಂಗಮವಾಗಿಯೇ ಉಳಿದಿದೆ.

**- ವಿಶ್ವೇಶ್ವರ** ಭಟ್



## ಕನ್ನಡ ಕವನಗಳು

### ಮುಳುಗುವ ದೋಣಿ!



ಮುಳುಗುವ ದೋಣಿ ಏರುವಾನೆ
ಮುಳುಗುವುದರಲ್ಲ
ಸಾಯುವುದಕ್ಕೂ ಅಲ್ಲ
ಮುಳುಗುವ ದೋಣಿಯನು
ಏರುವ ಪ್ರಯತ್ನ ಮಾಡುವೆನು!
ಮುಳುಗುವ ಆಸೆಯಿಂದಲ್ಲ!
ಪ್ರೀತಿಯುಳ್ಳವರ ಹೊತ್ತು
ತಿರುಗಿದ ದೋಣಿ
ನೋಡನೋಡುತ ಮುಳುಗುತಿ ಹುದಲ್ಲಿ!
ಅವರನ್ನೆಲ್ಲರನು
ಉಳಿಸಬಲ್ಲೆ ಎಂಬ ಹಮ್ಮಿನಿಂದಲ್ಲ!
ಆ ಕ್ಷಣಕೆ ಆಕ್ಷಣವೇ ಸಾಟಿ!
ದೋಣಿ ಏರಬೇಕೆಂಬುದೇ ಯೋಚನೆ!
ಬೇರೆ ಯೋಚನೆಗಳು ಹುಟ್ಟುವುದೂ ಇಲ್ಲ!
ಬೇರೇನೂ ಯೋಜನೆಗಳೂ ಇಲ್ಲ!
ಮುಳುಗುವ ದೋಣಿ ಏರುವಾಸೆ
ಮುಳುಗುವುದಕಲ್ಲ
ಸಾಯುವುದಕೂ ಅಲ್ಲ

**- ಮೌನಮುಖಿ**

### ನನಸೊಂದು ಹಸಿರಾಗಿ ಬಾಳಿನಲಿ ನಿಂತಿದೆ

ಹೊಸತಾದ ಮನವೊಂದು ತನುವಿನಲಿ ನಿಂತಿದೆ
ಬಳಿ ಬಂದ ಮುಖವೊಂದು ಒಲವಿನಲಿ ನಿಂತಿದೆ
ಕಾಣದೆಯೆ ಕಾಡುವ



ಮೋಹವದು ಎಲ್ಲಿದೆಯೊ
ಜೀವನದ ಛಲವೊಂದು ಮಡುವಿನಲಿ ನಿಂತಿದೆ
ಹೊಂಗೆಯ ನೆರಳಿನಲಿ ತಂಪಿದೆಯೋ ಇಲ್ಲವೊ
ಮೌನದಲಿ ಸವಿಯೊಂದು ಚೆಲುವಿನಲಿ ನಿಂತಿದೆ
ಗತಿಯಿರದಿಹ ಭಾವನೆಗಳು ತಿರುಗುತಿವೆ ಏತಕೊ
ದಯೆಯಿರುವ ಕನಸೊಂದು ಹೂವಿನಲಿ ನಿಂತಿದೆ
ಜೀವನದ ಪಯಣದೊಳು ಸುಖವಿದೆಯೆ ರತ್ನಾ
ನನಸೊಂದು ಹಸಿರಾಗಿ ಬಾಳಿನಲಿ ನಿಂತಿದೆ

**- ರತ್ನಾ ಭಟ್** ತಲಂಜೇರಿ

## ಒಳಿತು



ಪ್ರತಿದಿನವೂ ಭಗವಂತನಲ್ಲಿ ಬೇಡುತ್ತಿದ್ದ ಸದಾ ಒಳಿತನ್ನೇ ಮಾಡು ಅಂತ. ಅವನು ಕೈ ಹಿಡಿದ ಕೆಲಸವೆಲ್ಲವೂ ಒಳಿತಿನ ಕಡೆಗೆ ಸಾಗುತ್ತಿತ್ತು. ಆ ದಿನ ತುಂಬಾ ತುರ್ತಾಗಿ ಮನೆಗೆ ತಲುಪಬೇಕಿತ್ತು, ಮುಂದಿನ ಚಲನಚಿತ್ರಕ್ಕೆ ಕಥೆಯ ಆಯ್ಕೆಗಾಗಿ ಅವನ ಮನೆಯಲ್ಲಿ ನಿರ್ದೇಶಕರು ಕಾದು ಕುಳಿತಿದ್ದರು. ದೂರದೂರಿಂದ ಮನೆಗ ಹೊರಟು ಬರುವವನಿದ್ದ. ಹಾಗೆ ಬರುವ ವೇಳೆಯಲ್ಲಿ ಮಾರ್ಗ ಮಧ್ಯದಲ್ಲಿ ಆತನ ಗಾಡಿ ಕೈಕೊಟ್ಟಿತ್ತು. ಎಷ್ಟೇ ಪ್ರಯತ್ನ ಪಟ್ಟರೂ ಗಾಡಿ ಮತ್ತೆ ಹೊರಡಲೇ ಇಲ್ಲ ಮನೆಗೆ ಬಂದವರು ಕಾದು ಕಾದು ಬೇಸರದಿಂದಲೇ ಹೊರಟುಬಿಟ್ಟರು. ಆತ ಭಗವಂತನನ್ನ ಶಪಿಸಿದ ಬದುಕಲ್ಲೊಂದು ಹೊಸ ವಿಷಯ ಕಾಣುವುದಕ್ಕೆ ಪ್ರಾರಂಭವಾಗುವಾಗ ಅಡೆತಡೆ ಯನ್ನು ಏಕೆ ತರುತ್ತೀಯಾ? ಅಂತ ಭಗವಂತ ಏನು ಮಾತನಾಡಲಿಲ್ಲ. ಆತನಿಗೆ ಭಗವಂತನ ಮೇಲಿನ ಕೋಪ ಕಡಿಮೆಯಾಗಲು ಇಲ್ಲ. ಆ ದಿನ ಆತನ ಬೈಕು ಹಾಳಾಗದೆ ಇದ್ದರೆ ದಾರಿ ಮಧ್ಯದ ರಸ್ತೆಯಲ್ಲಿ ಆಗಿರುವ ಅಪಘಾತಕ್ಕೆ ಆತನೇ ಬಲಿಯಾಗಬೇಕಿತ್ತು... ಭಗವಂತ ನಕ್ಕುಬಿಟ್ಟ.

**- ಧೀರಜ್** ಬೆಳ್ಳಾರೆ

# ವಿವಿಧ ಬೇಡಿಕೆಗಳ ಈಡೇರಿಸಲು ಒತ್ತಾಯ

## ಅಂಗನವಾಡಿ ನೌಕರರ ಸಂಘದ ವತಿಯಿಂದ ಶಾಸಕ ಸಿಮೆಂಟ್ ಮಂಜುಗೆ ಮನವಿ

• ಪ್ರಜೋದಯ ವರದಿ

**ಸಕಲೇಶಪುರ:** ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ಅಂಗನವಾಡಿ ನೌಕರರ ಸಂಘದ ವತಿಯಿಂದ ಶಾಸಕ ಸಿಮೆಂಟ್ ಮಂಜು ಅವರಿಗೆ ಮನವಿ ಪತ್ರ ಸಲ್ಲಿಸಿದರು.



ಮನವಿಯನ್ನು ಸ್ವೀಕರಿಸಿ ಮಾತನಾಡಿದ ಸಿಮೆಂಟ್ ಮಂಜು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಸಮಾಜದ ಭವಿಷ್ಯವಾದ ಮಕ್ಕಳ ಅಭಿವೃದ್ಧಿಗೆ ಮಹತ್ವದ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹೇಳಿದರು. ಅಂಗನವಾಡಿ ನೌಕರರ ಸಮಸ್ಯೆಗಳ ಬಗ್ಗೆ ತಮಗೆ ಅರಿವು ಇದ್ದು, ಸಂಘದ ಮುಖಂಡರು ಮಂಡಿಸಿರುವ ಬೇಡಿಕೆಗಳ ಕುರಿತು ಸಮಗ್ರ ಮಾಹಿತಿಯನ್ನು ಸಂಗ್ರಹಿಸಿ ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು.

ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳ ಪಾಲನೆ-ಪೋಷಣೆ, ಪೌಷ್ಠಿಕ ಆಹಾರ, ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಅವರ ಸೇವೆಯನ್ನು ಸರ್ಕಾರ ಸಮರ್ಪಕವಾಗಿ ಪರಿಗಣಿಸಬೇಕು. ನೌಕರರ ಹಿತದೃಷ್ಟಿಯಿಂದ ಬೇಡಿಕೆಗಳನ್ನು ಪರಿಶೀಲಿಸಿ, ಸಾಧ್ಯವಾದ ಮಟ್ಟಿಗೆ ಸರ್ಕಾರದ ಗಮನಕ್ಕೆ ತಂದು ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಅಂಗನವಾಡಿ ನೌಕರರ ಸಂಘದ ತಾಲೂಕು ಅಧ್ಯಕ್ಷೆ ನಾಗಲಕ್ಷ್ಮಿ ಅವರು ಮಾತನಾಡಿ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ 6 ವರ್ಷದೊಳಗಿನ ಮಕ್ಕಳ ಪಾಲನೆ-ಪೋಷಣೆ, ಪೌಷ್ಠಿಕ ಆಹಾರ, ಆರೋಗ್ಯ ಹಾಗೂ ಪೂರ್ವ ಪ್ರಾಥಮಿಕ ಶಿಕ್ಷಣ ಒದಗಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ತಿಳಿಸಿದರಲ್ಲದೆ, ರಾಜ್ಯದ ಎಲ್ಲ ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ತರಗತಿಗಳನ್ನು ಆರಂಭಿಸಿ ಕೇಂದ್ರಗಳನ್ನು ಮತ್ತಷ್ಟು ಬಲಪಡಿಸುವಂತೆ ಆಗ್ರಹಿಸಿದರು.

ಇದೇ ವೇಳೆ ಅಂಗನವಾಡಿ ನೌಕರರನ್ನು ಕನಿಷ್ಠ ವೇತನ ಕಾಯ್ದೆಯ ವ್ಯಾಪ್ತಿಗೆ ತರಬೇಕು ಹಾಗೂ ಸೌಲಭ್ಯಗಳನ್ನು ನೀಡಬೇಕು, ಖಾಲಿ ಇರುವ ಕಾರ್ಯಕರ್ತೆ ಹಾಗೂ ಸಹಾಯಕಿ ಹುದ್ದೆಗಳನ್ನು ಭರ್ತಿ ಮಾಡಬೇಕು ಮತ್ತು ನಿವೃತ್ತ ಕಾರ್ಯಕರ್ತೆಯರಿಗೆ ಬಾಕಿ ಇರುವ ಗ್ರಾಚ್ಯುಟಿ ಹಣವನ್ನು ಬಿಡುಗಡೆ ಮಾಡಬೇಕು ಎಂದು ಅವರು ಮನವಿ ಮಾಡಿದರು.

ಈ ಬೇಡಿಕೆಗಳ ಹಿನ್ನೆಲೆಯಲ್ಲಿ ಮಾರ್ಚ್ 14 ಮತ್ತು 15 ರಂದು ರಾಜ್ಯದ ಎಲ್ಲಾ ಶಾಸಕರು ಹಾಗೂ ಸಚಿವರಿಗೆ ಮನವಿ ಸಲ್ಲಿಸಲಾಗುತ್ತಿದ್ದು, ಬೇಡಿಕೆಗಳು ಈಡೇರದಿದ್ದರೆ ಮಾರ್ಚ್ 23ರಿಂದ ಬೆಂಗಳೂರಿನಲ್ಲಿ ಅನಿರ್ದಿಷ್ಟಾವಧಿ ಹೋರಾಟ ನಡೆಸಲಾಗುವುದು ಎಂದು ನೌಕರರು ಇದೇ ಸಂದರ್ಭದಲ್ಲಿ ಎಚ್ಚರಿಕೆಯನ್ನೂ ನೀಡಿದರು.

ಈ ಸಂದರ್ಭದಲ್ಲಿ ಸಂಘದ ತಾಲ್ಲೂಕು ಕಾರ್ಯದರ್ಶಿ ಸುಮಿತ್ರಾ, ಪದಾಧಿಕಾರಿಗಳಾದ ಪ್ರೀತು, ಧನಲಕ್ಷ್ಮಿ, ಯಶೋದ, ಲಲಿತಾ ಹಾಗೂ ಅಂಗನವಾಡಿ ನೌಕರರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಗ್ಯಾಸ್ ಅಕ್ರಮ ಮಾರಾಟ: ಕಠಿಣ ಕ್ರಮದ ಎಚ್ಚರಿಕೆ

• ಪ್ರಜೋದಯ ವರದಿ

**ತುಮಕೂರು:** ಎಲ್‌ಪಿಜಿ ಸಿಲಿಂಡರ್‌ಗಳ ಸಂಗ್ರಹಣೆ ಮತ್ತು ಕಾಳಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಪೊಲೀಸರಿಗೆ ಸೂಚನೆ ನೀಡಲಾಗಿದೆ ಎಂದು ಗೃಹ ಸಚಿವ ಜಿ ಪರಮೇಶ್ವರ ಅವರು ಶನಿವಾರ ಹೇಳಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದ ಅನಿಲ ಪೂರೈಕೆಯಲ್ಲಿ ಭಾರೀ ವ್ಯತ್ಯಯ ಉಂಟಾಗಿದ್ದು, ಜನ ಎಲ್‌ಪಿಜಿ ಸಿಲಿಂಡರ್‌ಗಳಿಗಾಗಿ ಪರದಾಡುತ್ತಿದ್ದಾರೆ. ಯಾರಾದರೂ ಅನಿಲ ಸಿಲಿಂಡರ್‌ಗಳನ್ನು ಸಂಗ್ರಹಿಸಲು ಅಥವಾ ಕಾಳಸಂತೆಯಲ್ಲಿ ಮಾರಾಟ ಮಾಡಲು ಪ್ರಯತ್ನಿಸಿದರೆ, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ರಾಜ್ಯಾದ್ಯಂತ ಪೊಲೀಸರಿಗೆ ಈ ನಿಟ್ಟಿನಲ್ಲಿ ಸೂಚನೆ ನೀಡಲಾಗಿದೆ... ನಾವು ಅದಕ್ಕೆ ಅವಕಾಶ ನೀಡುವುದಿಲ್ಲ ಎಂದು ಪರಮೇಶ್ವರ ವರದಿಗಾರರಿಗೆ ತಿಳಿಸಿದ್ದಾರೆ.

ಅಧಿಕಾರಿಗಳ ಹೇಳಿಕೆಯನ್ನು ಉಲ್ಲೇಖಿಸಿ, ಮನೆಗಳಿಗೆ ಅಡಿಗೆ ಅನಿಲ ಸಿಲಿಂಡರ್‌ಗಳ ಪೂರೈಕೆಯಲ್ಲಿ ಪ್ರಸ್ತುತ ಯಾವುದೇ ಸಮಸ್ಯೆಗಳಿಲ್ಲ ಎಂದು ಅವರು ಹೇಳಿದರು.

## ಪ್ರತಿ ಹೆಣ್ಣುಮಕ್ಕಳಿಗೂ ಹೆಚ್.ಪಿ.ವಿ. ವ್ಯಾಕ್ಸಿನ್ ಅತ್ಯಗತ್ಯ: ಡಾ.ಯಶವಂತ್



• ಪ್ರಜೋದಯ ವರದಿ

**ಹಾರನಹಳ್ಳಿ:** ಹೆಣ್ಣುಮಕ್ಕಳಲ್ಲಿ ಗರ್ಭಕೊರಳಿನ ಕ್ಯಾನ್ಸರ್ ತಡೆಯುವ ನಿಟ್ಟಿನಲ್ಲಿ ಹೆಚ್.ಪಿ.ವಿ. ವ್ಯಾಕ್ಸಿನ್ ಅತ್ಯುತ್ತಮವಾಗಿದ್ದು, 14 ವರ್ಷ ವಯಸ್ಸಿನ ಹೆಣ್ಣು ಮಕ್ಕಳು ಇದರ ಸದುಪಯೋಗಪಡಿಸಿಕೊಂಡು, ಕ್ಯಾನ್ಸರ್ ರಹಿತ ಸಮಾಜ ನಿರ್ಮಾಣಕ್ಕೆ ಸಹಕರಿಸಬೇಕು ಎಂದು ಪ್ರಾಥಮಿಕ ಆರೋಗ್ಯ ಕೇಂದ್ರ ಹಾರನಹಳ್ಳಿಯ ವೈದ್ಯಾಧಿಕಾರಿ ಡಾ. ಕೆ.ಪಿ.ಯಶವಂತ್ ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಬಿ ಪರಮೇಶ್, ಎಚ್.ಪಿ.ವಿ. ವೈರಸ್ ಒಂದು ಡಿಎನ್‌ಎ ವೈರಸ್ ಆಗಿದ್ದು, ಮುಖ್ಯವಾಗಿ ಚರ್ಮ ಹಾಗೂ ಶ್ಲೇಷ್ಮಕ ಪದರಕ್ಕೆ ಸೋಂಕು ಉಂಟು ಮಾಡುತ್ತದೆ. ಹೆಚ್ಚಾಗಿ ಲೈಂಗಿಕ ಸಂಪರ್ಕ ಹಾಗೂ ಚರ್ಮದ ಸಂಪರ್ಕದಿಂದ ಬರುವ ಈ ಕಾಯಿಲೆಯು ಕ್ಯಾನ್ಸರ್ ಮಟ್ಟಕ್ಕೂ ಹೋಗಿ, ಮಾರಣಾಂತಿಕ ಆಗುತ್ತದೆ. ಈಗಾಗಲೇ ಸರಬರಾಜು ಆಗಿರುವ ಗಾರ್ಡಿಸಿಲ್ ವ್ಯಾಕ್ಸಿನ್ ಅನ್ನು 14 ವರ್ಷದ ಹೆಣ್ಣು ಮಕ್ಕಳು ಪಡೆಯುವದರಿಂದ, ಗರ್ಭಕೋಶದ ಕ್ಯಾನ್ಸರ್‌ನ ತಡೆಯುವುದರಿಂದ ಸುಂದರ ಸಮಾಜ ನಿರ್ಮಾಣ ಸಾಧ್ಯ ಎಂದರು.

ಮಾಣಿಕ್ಯ ಸುಷ್ಮಾ ಹಾಗೂ ಸೋನಿಯಾರಿಗೆ ವ್ಯಾಕ್ಸಿನ್ ಕೊಡುವುದರ ಮುಖಾಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಎಲ್‌ಹೆಚ್‌ವಿ ವೃಂದಾಮಣಿ, ಆಶಾ, ಲಕ್ಷ್ಮಿ ಜೇನುಶ್ರೀ ಗೀತಾ ಶಶಿಕಲಾ ಪ್ರಮೀಳಾ, ಲತಾ, ಹಾಗೂ ಆಶಾ ಕಾರ್ಯಕರ್ತೆಯರು ಹಾಜರಿದ್ದರು.

## ಗಲ್ಫ್ ರಾಷ್ಟ್ರಗಳ ಮೇಲೆ ದಾಳಿ ಮಾಡದಂತೆ ಇರಾನ್‌ಗೆ ಹಮಾಸ್ ಒತ್ತಾಯ



ಟೆಹ್ರಾನ್: ಅಮೇರಿಕಾ ಇರಾನ್ ಮೇಲೆ ಜಂಟಿ ದಾಳಿ ನಡೆಸುತ್ತಿದ್ದು, ಇದಕ್ಕೆ ಪ್ರತಿಕ್ರಿಯೆಯಾಗಿ ಇರಾನ್ ತನ್ನ ನೆರೆಯ ಗಲ್ಫ್ ರಾಷ್ಟ್ರಗಳ ಮೇಲೆ ದಾಳಿ ನಡೆಸುವ ಮೂಲಕ ತನ್ನ ಪ್ರತೀಕಾರವನ್ನು ತೀರಿಸಿಕೊಳ್ಳುತ್ತಿದೆ. ಇದು ಇಡೀ ಮಧ್ಯಪ್ರಾಚ್ಯವನ್ನೇ ಯುದ್ಧದಲ್ಲಿ ಬೇಯುವಂತೆ ಮಾಡುತ್ತಿದ್ದು, ಇದರಲ್ಲಿ ಈವರೆಗೂ ಇರಾನ್ ಬೆಂಬಲವಾಗಿದ್ದ ಹಮಾಸ್ ಸದ್ಯ ಈ ನಿಲುವಿನಿಂದ ಹಿಂದೆ ಸರಿಯುತ್ತಿದ್ದಂತಿದ್ದು, ಮೊದಲ ಬಾರಿಗೆ ಗಲ್ಫ್ ರಾಷ್ಟ್ರಗಳ ಮೇಲೆ ದಾಳಿ ನಡೆಸದಂತೆ ಇರಾನ್‌ಗೆ ಬಹಿರಂಗವಾಗಿಯೇ ಒತ್ತಾಯಿಸಿದೆ.

# ಲೋಕ ಅದಾಲತ್‌ನಲ್ಲಿ ಮತ್ತೆ ಒಂದಾದ ದಂಪತಿ

## ಮೂರು ವರ್ಷಗಳ ಹಿಂದೆ ವಿಚ್ಛೇದನ ಕೋರಿದ್ದರು

• ಪ್ರಜೋದಯ ವರದಿ

**ಅರಕಲಗೂಡು:** ವೈವಾಹಿಕ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದ ದಂಪತಿ ಲೋಕ ಅದಾಲತ್‌ನಲ್ಲಿ ಮತ್ತೆ ಒಂದಾದ ಪ್ರಕರಣ ಪಟ್ಟಣದ ನ್ಯಾಯಾಲಯದಲ್ಲಿ ಶನಿವಾರ ನಡೆಯಿತು.



ತಾಲ್ಲೂಕಿನ ಸೋಂಪುರ ಗ್ರಾಮದ ಸಿ. ಜ್ಯೋತಿ ಮತ್ತು ಸಾಲಿಗ್ರಾಮ ತಾಲ್ಲೂಕು ದಿಡ್ಡಹಳ್ಳಿ ಗ್ರಾಮದ ಡಿ.ಯೋಗೇಶ್ ದಂಪತಿ ದಾಂಪತ್ಯದಲ್ಲಿನ ಭಿನ್ನಾಭಿಪ್ರಾಯದಿಂದ 3 ವರ್ಷಗಳ ಹಿಂದೆ ವಿಚ್ಛೇದನ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು ಪ್ರಕರಣ ನಡೆಯುತ್ತಿತ್ತು.

ಶನಿವಾರ ನಡೆದ ಲೋಕ ಅದಾಲತ್‌ನಲ್ಲಿ ಹಿರಿಯ ಶ್ರೇಣಿ ನ್ಯಾಯಾಧೀಶ ಬಿ. ಕೆ.ನಾಗೇಶ್ ಮೂರ್ತಿ ದಂಪತಿಗೆ ತಿಳುವಳಿಕೆ ಹೇಳಿ ರಾಜೀ ಸಂಧಾನದ ಮೂಲಕ ದಂಪತಿಯನ್ನು ಮತ್ತೆ ಒಂದುಗೂಡಿಸಿದರು.

ದಂಪತಿಯಿಂದ ಪರಸ್ಪರ ಹಾರ ಬದಲಿಸಿ ಶುಭ ಕೋರಲಾಯಿತು.

ಸುದ್ದಿಗಾರರೊಂದಿಗೆ ಮಾತನಾಡಿದ ನ್ಯಾಯಾಧೀಶ ನಾಗೇಶ್‌ಮೂರ್ತಿ ಅವರು ದಂಪತಿಗಳಲ್ಲಿ ಸಾಮರಸ್ಯ ಮುಖ್ಯ, ಕುಟುಂಬ ಚೆನ್ನಾಗಿದ್ದರೆ ಸಮಾಜ ಸುಭದ್ರವಾಗಿರುತ್ತದೆ. ಈ ಪ್ರಕರಣ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿರುವ ದಂಪತಿಗಳಿಗೆ ಅನುಕರಣೀಯವಾಗಬೇಕು, ದಂಪತಿ ಅನ್ಯೋನ್ಯದಿಂದ ಬಾಳುವೆ ನಡೆಸುವಂತೆ ಹಾರೈಸಿದರು. ವಕೀಲರಾದ ಪಿ.ಎಸ್. ಗುರುಪ್ರಸಾದ್, ಎ.,ಎಸ್. ಮಧು, ಕಿರಣ್‌ಕುಮಾರ್, ಶಂಕರಯ್ಯ, ಗಣೇಶ್‌ಶೆಟ್ಟಿ, ಬಿ.ಎಂ. ಮಹೇಶ್, ಪ್ರಶಾಂತ್ ಉಪಸ್ಥಿತರಿದ್ದರು.

**235 ಪ್ರಕರಣ ಇತ್ಯರ್ಥ:** ಪಟ್ಟಣದ ನಾಲ್ಕು ನ್ಯಾಯಾಲಯಗಳಲ್ಲಿ 9157 ಪ್ರಕರಣಗಳಿದ್ದು ಶನಿವಾರ ನಡೆದ ಲೋಕ ಅದಾಲತ್ ಮುಂದೆ 549 ಪ್ರಕರಣಗಳನ್ನು ಇಡಲಾಗಿತ್ತು. 235 ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಗೊಳಿಸಲಾಯಿತು.

# ಶ್ರೀ ತಿರುಮಲ ರಂಗನಾಥಸ್ವಾಮಿಯವರ ಜಾತ್ರಾ ವೈಭವ

• ಪ್ರಜೋದಯ ವರದಿ

**ಆಲೂರು:** ಮರಸು ಗ್ರಾಮದ ಶ್ರೀ ತಿರುಮಲ ರಂಗನಾಥಸ್ವಾಮಿ ಮತ್ತು ಉಡುಸಲಮ್ಮ ದೇವಿಯವರ ಜಾತ್ರೆ ಅತ್ಯಂತ ವೈಭವದಿಂದ ನಡೆಯಿತು.



ಶುಕ್ರವಾರ ರಾತ್ರಿ ತಿರುಮಲ ರಂಗನಾಥಸ್ವಾಮಿ ಮತ್ತು ಉಡುಸಲಮ್ಮ ದೇವಿಯವರ ಅಡ್ಡೆ ದೇವರು ದೇವಸ್ಥಾನದಿಂದ ಗ್ರಾಮದ ದೊಡ್ಡಕೆರೆ ಗೌರಿ ಕಡಲು ಗಂಗಾಸ್ಥಾನಕ್ಕೆ ರಾತ್ರಿ 2 ಗಂಟೆಗೆ ತಲುಪಿದವು. ಗಂಗಾ ಸ್ಥಾನದಿಂದ ಮಡಿವಾಳ ವಂಶಸ್ತರಾದ ವೀರೇಶ ರವರು ಉಡುಸಲಮ್ಮ ಕಳಸವನ್ನು ಹೊತ್ತು ನಡೆಮುಡಿಯಲ್ಲಿ ವಾದ್ಯಗೋಷ್ಠಿ, ಪಟಾಕಿ ಸಿಡಿತ, ಹೊಗಳಿಕೆ ಹಾಡಿನೊಂದಿಗೆ ಶನಿವಾರ ಬೆಳಿಗ್ಗೆ 7 ಕ್ಕೆ ದೇವಸ್ಥಾನದ ಬಳಿ ತಲುಪಿತು. ಗ್ರಾಮದ ಗಂಗಣ್ಣ ಹೊಗಳಿಕೆ ಹಾಡು ಹೇಳಿದರು.

ಪೂಜಾ ಕೈಂಕರ್ಯದ ನಂತರ ಕೆಂಡೋತ್ಸವ ನಡೆಯಿತು. ಸಾವಿರಾರು ಭಕ್ತರು ಕೆಂಡ ಹಾಯ್ದು ಪುನೀತರಾದರು. ಇದೆ ಸಂದರ್ಭದಲ್ಲಿ ಉಡುಸಲಮ್ಮ ದೇವಿಗೆ 101 ಎಡೆ ಸಮರ್ಪಣೆ ಮಾಡಲಾಯಿತು. ಪುರಾತನ ಕಾಲದಿಂದ ನಡೆದು ಬಂದಿರುವಂತೆ ಮರಸು ಗ್ರಾಮದ ಸುತ್ತಮುತ್ತಲಿನ ಗ್ರಾಮದೇವತೆಗಳು, ಕೂಡುನಾಡು, ಗ್ರಾಮದ ಮುಖಂಡರು, ಅಡ್ಡೆ ಹೊರುವವರು, ಚಪ್ಪರ ಹಾಕಿದವರು, ದೀವಟಿಗೆ ಸೇರಿದಂತೆ ಜಾತ್ರೆಗೆ ಸಾಕ್ಷಿಯಾದ ಎಲ್ಲ ಗ್ರಾಮದ, ದೇವಸ್ಥಾನದ ಮುಖಂಡರಿಗೆ ಎಡೆ ಸಮರ್ಪಣೆ ಮಾಡಲಾಯಿತು.

ಜಾತ್ರೆ ಅಂಗವಾಗಿ ದೇವಸ್ಥಾನದಲ್ಲಿ ಶ್ರೀ ರಂಗನಾಥಸ್ವಾಮಿ, ಶ್ರೀ ಉಡುಸಲಮ್ಮ ದೇವರಿಗೆ ಬೆಳ್ಳಿ ಅಲಂಕಾರ ಮಾಡಲಾಗಿತ್ತು. ಮಧ್ಯಾಹ್ನ ಮಹಾ ಮಂಗಳಾರತಿ ನಂತರ ಭಕ್ತರು ದರ್ಶನ ಪಡೆದರು.

ಮಾ. 15 ಭಾನುವಾರ ಸಂಜೆ 8 ಗಂಟೆಗೆ ದೇವಸ್ಥಾನದ ಆವರಣದಲ್ಲಿ ಶ್ರೀ ಹರಿಭಕ್ತ ಮಹಾಂದಾತ ಅಥವಾ ಶ್ರೀ ಲಕ್ಷ್ಮೀ ಶ್ರೀ ಶನಿದೇವರ ಪಂಥ ಎಂಬ ಪೌರಾಣಿಕ ನಾಟಕ ನಡೆಯಲಿದೆ. ಸಂಸದ ಶ್ರೇಯಸ್ ಪಟೇಲ್, ಶಾಸಕರಾದ ಸಿಮೆಂಟ್ ಮಂಜು, ಸೂರಜ್ ರೇವಣ್ಣ, ಮಾಜಿ ಸಚಿತ ಎಚ್.ಕೆ.ಕುಮಾರಸ್ವಾಮಿ, ತಹಶೀಲ್ದಾರ್ ಮಲ್ಲಿಕಾರ್ಜುನ, ಎಂ. ಮುರಳಿ ಮೋಹನ್ ಭಾಗವಹಿಸಲಿದ್ದಾರೆ.

ರಾತ್ರಿ ನಡೆದ ನಡೆಮುಡಿ ಉತ್ಸವದ ಸಂದರ್ಭದಲ್ಲಿ ಯಾವುದೆ ಅಹಿತಕರ ಘಟನೆಗಳು ಸಂಭವಿಸದಂತೆ ಗ್ರಾಮ ಆಡಳಿತ ಅಧಿಕಾರಿ ರವಿ ನಾಯ್ಕ, ಗ್ರಾಮದ ಮುಖಂಡರು, ಪೊಲೀಸ್ ಸಿಬ್ಬಂದಿಗಳಾದ ಎಎಸ್ಐ ಚಂದ್ರಶೇಖರ್, ಸಂಗಮ್, ಮಂಜುನಾಥ್ ಭಾಗವಹಿಸಿದ್ದರು. ಜಾತ್ರೆ ನಡೆಯುವ ಸಂದರ್ಭದಲ್ಲಿ ಆರೋಗ್ಯ ಇಲಾಖೆ ವತಿಯಿಂದ ಮುನ್ನೆಚ್ಚರಿಕೆ ವಹಿಸಲಾಗಿತ್ತು. ಸಾವಿರಾರು ಭಕ್ತರಿಗೆ ಈ ಸಂದರ್ಭದಲ್ಲಿ ಅನ್ನ ಸಂತರ್ಪಣೆ ನಡೆಯಿತು.

ಮರಸು ಶ್ರೀ ರಂಗನಾಥಸ್ವಾಮಿ, ಉಡುಸಲಮ್ಮ ಜಾತ್ರೆ ಸಂದರ್ಭದಲ್ಲಿ ಅಡ್ಡೆ ದೇವರ ಸಮ್ಮುಖದಲ್ಲಿ ನೂರೊಂದು ಎಡೆಯನ್ನು ಸಮರ್ಪಿಸಲಾಯಿತು.


ಶ್ರೀ ಉಡುಸಲಮ್ಮ ದೇವಿ ಕಳಸ' ವನ್ನು ಮಡಿವಾಳ ವಂಶಸ್ಥರಾದ ವೀರೇಶ್ ಅವರು ಗಂಗಾಸ್ಥಾನದಿಂದ ದೇವಸ್ಥಾನದವರೆಗೆ ನಡೆಮುಡಿಯಲ್ಲಿ ಹೊತ್ತು ತಂದರು. ಭಕ್ತರು ಪೂಜೆ ಸಲ್ಲಿಸಿ ಭಕ್ತಿ ಮೆರೆದರು.

# ಅಮೇರಿಕಾದ 5 ಟ್ಯಾಂಕರ್ ವಿಮಾನಗಳಿಗೆ ಹಾನಿ

## ಟ್ರಂಪ್ ಎಚ್ಚರಿಕೆಗೆ ತಲೆಭಾಗದ ಇರಾನ್: ಕ್ಷಿಪಣಿ ದಾಳಿ

• ಪ್ರಜೋದಯ ವರದಿ

**ಸೌದಿ ಅರೇಬಿಯಾ:** ಮಧ್ಯಪೂರ್ವದಲ್ಲಿ ಉದ್ವಿಗ್ನತೆ ತೀವ್ರಗೊಳ್ಳುತ್ತಿರುವ ನಡುವೆಯೇ ಸೌದಿ ಅರೇಬಿಯಾದಲ್ಲಿರುವ ಅಮೆರಿಕದ ಸೈನಿಕ ನೆಲೆಯಲ್ಲಿ ಇರಾನ್ ಕ್ಷಿಪಣಿ ದಾಳಿ




ನಡೆಸಿದ್ದು. ಈ ದಾಳಿಯಲ್ಲಿ ಅಮೆರಿಕ ವಾಯುಪಡೆಯ ಐದು ಇಂಧನ ಟ್ಯಾಂಕರ್ ವಿಮಾನಗಳಿಗೆ ಹಾನಿಯಾಗಿದೆ ಎಂದು ವರದಿಗಳಿಂದ ತಿಳಿದುಬಂದಿದೆ.

ಅಮೆರಿಕದ ಇಬ್ಬರು ಅಧಿಕಾರಿಗಳ ಹೇಳಿಕೆಯನ್ನು ಉಲ್ಲೇಖಿಸಿ ದಿ ವಾಲ್ ಸ್ಟ್ರೀಟ್ ಜರ್ನಲ್ ಈ ಕುರಿತು ವರದಿ ಮಾಡಿದೆ. ವರದಿ ಪ್ರಕಾರ, ಸೌದಿ ಅರೇಬಿಯಾದಲ್ಲಿರುವ ಪ್ರಿನ್ಸ್ ಸುಲ್ತಾನ್ ಏರ್‌ಬೇಸ್ ನೆಲದಲ್ಲಿದ್ದ ಅಮೆರಿಕದ ವಾಯುಪಡೆಯ 5 ಟ್ಯಾಂಕರ್ ವಿಮಾನಗಳು ಇರಾನ್ ನಡೆಸಿದ ಕ್ಷಿಪಣಿ ದಾಳಿಯಿಂದ ಹಾನಿಗೊಳಗಾಗಿವೆ ಎಂದು ತಿಳಿದುಬಂದಿದೆ.

ವಿಮಾನಗಳು ಸಂಪೂರ್ಣವಾಗಿ ನಾಶವಾಗಿಲ್ಲ ಎನ್ನಲಾಗುತ್ತಿದ್ದು, ಹಾನಿಗೊಳಗಾದ ವಿಮಾನಗಳ ದುರಸ್ತಿ ಕಾರ್ಯ ನಡೆಯುತ್ತಿದೆ ಎಂದು ವರದಿಘಳು ತಿಳಿಸಿವೆ.

ಏತನ್ಮಧ್ಯೆ ಇರಾಕ್‌ನ ಪಶ್ಚಿಮ ಭಾಗದಲ್ಲಿ ಅಮೆರಿಕದ ಸೈನಿಕ ರಿಫ್ಯೂಯಲಿಂಗ್ ವಿಮಾನ ಪತನಗೊಂಡು ಅದರಲ್ಲಿದ್ದ ಆರು ಸಿಬ್ಬಂದಿ ಸಾವನ್ನಪ್ಪಿದ್ದಾರೆ ಎಂದು ಅಮೆರಿಕ ಸೇನೆ ದೃಢಪಡಿಸಿದೆ. ಅಮೆರಿಕದ -135 ರಿಫ್ಯೂಯ ಲಿಂಗ್ ವಿಮಾನ ಗುರುವಾರ ಪಶ್ಚಿಮ ಇರಾಕ್‌ನಲ್ಲಿ ಪತನಗೊಂಡಿದ್ದು, ಇದು ಶತ್ರು ನಡೆಸಿದ ದಾಳಿಯಲ್ಲ ಎಂದು ಸೇನೆ ಸ್ಪಷ್ಟಪಡಿಸಿದೆ.

ಪೆಂಟಗನ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್, ಇರಾನ್ ವಿರುದ್ಧದ ಕಾರ್ಯಾ ಚರಣೆ ಮುಂದುವರಿಯುತ್ತದೆ ಎಂದಿದ್ದಾರೆ.

ಇದೇ ವೇಳೆ ಮಧ್ಯಪೂರ್ವದಲ್ಲಿ ಅಮೆರಿಕ ಹಾಗೂ ಇರಾನ್ ನಡುವೆ ನಡೆಯುತ್ತಿರುವ ಸಂಘರ್ಷ ದಿನೇ ದಿನೇ ತೀವ್ರಗೊಳ್ಳುತ್ತಿದೆ. ಇರಾನ್ ವಿರುದ್ಧ ನಡೆಯುತ್ತಿರುವ ಅಮೆರಿಕದ ಸೈನಿಕ ಕಾರ್ಯಾ ಚರಣೆಗಳ ಹಿನ್ನೆಲೆಯಲ್ಲಿ ಹಲವು ದಾಳಿಗಳು ಮತ್ತು ಪ್ರತಿದಾಳಿಗಳು ನಡೆಯುತ್ತಿವೆ.

ಅಮೇರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಇರಾನ್ ವಿರುದ್ಧ ಕಠಿಣ ಎಚ್ಚರಿಕೆ ನೀಡಿದ್ದರೂ, ಇತ್ತೀಚಿನ ದಾಳಿಯೊಂದಿಗೆ ಪರಿಸ್ಥಿತಿ ಮತ್ತಷ್ಟು ಉದ್ವಿಗ್ನಗೊಂಡಿದೆ.

ಮಧ್ಯಪೂರ್ವದಲ್ಲಿ ಸಂಘರ್ಷ ಮುಂದುವರಿದರೆ ಇನ್ನಷ್ಟು ದಾಳಿಗಳು ಸಂಭವಿಸುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

## ಹಳ್ಳಿ ಮೈಸೂರಿನಲ್ಲಿ ಶ್ರೀ ಸೀಗೆತಾಳಮ್ಮನವರ ಅದ್ದೂರಿ ರಥೋತ್ಸವ: ಭಕ್ತರ ಸಂಭ್ರಮ



• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕಿನ ಹಳ್ಳಿ ಮೈಸೂರು ಗ್ರಾಮದ ಅಧಿದೇವತೆ ಶ್ರೀ ಸೀಗೆತಾಳಮ್ಮನವರ ಜಾತ್ರಾ ಮಹೋತ್ಸವವು ಸಾವಿರಾರು ಭಕ್ತಾಧಿಗಳ ಸಮ್ಮುಖದಲ್ಲಿ ಅತ್ಯಂತ ಸಡಗರ ಮತ್ತು ವೈಭವದಿಂದ ನೆರವೇರಿತು.

ಮೂರು ವರ್ಷಕ್ಕೊಮ್ಮೆ ಜರುಗುವ ಈ ವಿಶೇಷ ಜಾತ್ರೆಯನ್ನು ಕಣ್ತುಂಬಿಕೊಳ್ಳಲು ಸುತ್ತಮುತ್ತಲ ಗ್ರಾಮಸ್ಥರು ಅಪಾರ ಸಂಖ್ಯೆಯ ಜನಸ್ತೋಮ ಆಗಮಿಸಿತ್ತು. ಶುಕ್ರವಾರ ಮುಂಜಾನೆಯಿಂದಲೇ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕಪೂಜಾಕಾರ್ಯಕ್ರಮಗಳು ಆರಂಭವಾಗಿದ್ದು, ದೇವಿಗೆ ವಿಶೇಷ ಅಲಂಕಾರ ಹಾಗೂ ಮಹಾಮಂಗಳಾರತಿ ನೆರವೇರಿಸುವ ಮೂಲಕ ಭಕ್ತರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು.

ಸಂಜೆ ವೇಳೆ ರಥ ಬೀದಿಯಲ್ಲಿ ಜಮಾಯಿಸಿದ ಗ್ರಾಮಸ್ಥರು ರಥಕ್ಕೆ ವಿಶೇಷ ಪೂಜೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ರಾತ್ರಿ ಸುಮಾರು 10.30ರ ವೇಳೆಗೆ ವಾಡಿಕೆಯಂತೆ ಗೋಹಳ್ಳಿ ಗ್ರಾಮಸ್ಥರು ತೇರು ಎಳೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಮಂಗಳವಾದ್ಯ, ತಮಟೆ ನಗಾರಿಗಳ ಶಬ್ದ ಹಾಗೂ ಭಕ್ತರ ಜಯಘೋಷಗಳ ನಡುವೆ ಸಾಗಿದ ರಥೋತ್ಸವವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸುವ ಮೂಲಕ ಭಕ್ತರಿಗೆ ಸಡಗರ ತಂದಿತು.

# ಅಂಗನವಾಡಿಗಳಿಗೆ ಅಗತ್ಯ ಸೌಕರ್ಯಕ್ಕೆ ಕ್ರಮ

## ಟಿ.ವಿ., ಭಾಗ್ಯಲಕ್ಷ್ಮಿ ಬಾಂಡ್ ವಿತರಣೆ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಅಂಗನವಾಡಿಗಳಿಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಶಕ್ತಿಗೆ ಮೀರಿ ಶ್ರಮಿಸುವುದಾಗಿ ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.



ಪಟ್ಟಣದ ಪುರಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂಗನವಾಡಿಗಳಿಗೆ ಟಿವಿ, ಭಾಗ್ಯಲಕ್ಷ್ಮಿ ಬಾಂಡ್ ಹಾಗೂ ಕುಡಿಯುವ ನೀರಿನ ಶುದ್ಧೀಕರಣ ಫಿಲ್ಟರ್‌ಗಳನ್ನು ವಿತರಿಸಿ ಮಾತನಾಡಿದ ಅವರು, ತಾಲ್ಲೂಕಿನ ಸುಮಾರು 107 ಅಂಗನವಾಡಿಗಳಿಗೆ ಟಿವಿಗಳನ್ನು ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇದರ ಜೊತೆಗೆ ಬಡ ಕುಟುಂಬಗಳಲ್ಲಿ ಜನಿಸಿದ ಹೆಣ್ಣುಮಕ್ಕಳ ಭವಿಷ್ಯ ಭದ್ರತೆಗಾಗಿ 2006ರಲ್ಲಿ ಅಂದಿನ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರ ಅವಧಿಯಲ್ಲಿ ಜಾರಿಗೆ ಬಂದ ಭಾಗ್ಯಲಕ್ಷ್ಮಿ ಯೋಜನೆಯ ಬಾಂಡ್‌ಗಳನ್ನು ವಿತರಿಸಲಾಗುತ್ತಿದೆ. ಒಂದು ಕುಟುಂಬದಲ್ಲಿ ಎರಡು ಹೆಣ್ಣುಮಕ್ಕಳಿದ್ದರೆ ಅವರಿಗೆ 18 ವರ್ಷ ತುಂಬಿದ ಬಳಿಕ ಮೆಚ್ಯೂರಿಟಿಯಾಗಿ ಬಾಂಡ್ ನೀಡುವ ಯೋಜನೆಯಾಗಿದೆ ಎಂದು ಅವರು ತಿಳಿಸಿದರು.

ಅದೇ ರೀತಿಯಲ್ಲಿ ಸರ್ಕಾರದಿಂದ ದೊರೆತಿರುವ ಶುದ್ಧ ಕುಡಿಯುವ ನೀರಿನ ಫಿಲ್ಟರ್‌ಗಳನ್ನು ಕೂಡ ಅಂಗನವಾಡಿಗಳಿಗೆ ವಿತರಿಸಲಾಗುತ್ತಿದೆ. ಮಕ್ಕಳಿಗೆ ಶುದ್ಧ ಕುಡಿಯುವ ನೀರು ದೊರೆಯುವಂತೆ ಮಾಡುವುದು ಇದರ ಉದ್ದೇಶವಾಗಿದೆ ಎಂದು ಹೇಳಿದರಲ್ಲದೆ, ಕಳೆದ ಬಾರಿ ಅಂಗನವಾಡಿಗಳ ಮೂಲಭೂತ ಸೌಕರ್ಯಗಳ ಕುರಿತು ಮಾಹಿತಿ ಸಂಗ್ರಹಿಸಿದ್ದೇನೆ. ಈಗಲೂ ಎಲ್ಲೆಲ್ಲಿ ವಿದ್ಯುತ್ ಸಮಸ್ಯೆ ಇದೆ ಎಂಬ ಮಾಹಿತಿ ನೀಡಿದರೆ ಅದನ್ನು ತಕ್ಷಣ ಸರಿಪಡಿಸುವ ಕ್ರಮ ಕೈಗೊಳ್ಳಲಾಗುವುದು ಎಂದರು.

ನಮ್ಮ ಭಾಗದಲ್ಲಿ ಹೆಚ್ಚಿನ ಮಳೆಯ ಪರಿಣಾಮ ಕೆಲ ಅಂಗನವಾಡಿಗಳಿಗೆ ಹಾನಿಯಾಗಿರುವುದು ಗಮನಕ್ಕೆ ಬಂದಿದೆ. ಅವುಗಳನ್ನು ಕೂಡ ಹಂತ ಹಂತವಾಗಿ ಸರಿಪಡಿಸುವ ಕೆಲಸ ಮಾಡಲಾಗುವುದು ಎಂದು ಸಿಮೆಂಟ್ ಮಂಜು ಅವರು ತಿಳಿಸಿದರು.

ಅಂಗನವಾಡಿಗೆ ಬರುವ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಪೌಷ್ಟಿಕ ಆಹಾರ ಸಿಗಬೇಕು. ಅವರ ಆರೋಗ್ಯ ಮತ್ತು ದೈಹಿಕ ಬೆಳವಣಿಗೆ ದೃಷ್ಟಿಯಿಂದ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸುವುದು ನಮ್ಮ ಉದ್ದೇಶವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಿಡಿಪಿಓ ಇಂದಿರ, ಸಿಐಟಿಯು ಸಂಘಟನೆಯ ಹೇಮಾ, ಸುಮಿತ್ರ, ಅಂಗನವಾಡಿ ಮೇಲ್ವಿಚಾರಕಿ ಜ್ಯೋತಿ, ಪುರಸಭಾ ಮಾಜಿ ಸದಸ್ಯೆ ವನಜಾಕ್ಷಿ ವಿವಿಧ ಸಂಘಟನೆಗಳ ಮುಖಂಡರು, ಸದಸ್ಯರು ಹಾಗೂ ಸಿಬ್ಬಂದಿ ಇದ್ದರು.

## ಅಂತರ‍್ರಾಷ್ಟ್ರೀಯ ಮಹಿಳಾ ದಿನಾಚರಣೆ

# ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆ




• ಪ್ರಜೋದಯ ವರದಿ

**ಸಕಲೇಶಪುರ:** ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಾರ್ಚ್ 17 ರಂದು ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ತಾಲ್ಲೂಕು ಅಧ್ಯಕ್ಷ ಶಾಂತ ಅವರು ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಧ್ಯಾಹ್ನ 1 ಗಂಟೆಗೆ ಮಹಿಳಾ ನೌಕರರಿಗಾಗಿ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು ನಡೆಯಲಿದ್ದು, ಸಂಜೆ 4 ಗಂಟೆಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ನೌಕರರಿಗೆ ಸಾಧನ ಪುರಸ್ಕಾರ ಪ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಮಹಿಳೆಯರಲ್ಲಿ ಕ್ರೀಡಾ ಮನೋಭಾವ ಬೆಳೆಸುವ ಮತ್ತು ಅವರ ಪ್ರತಿಭೆಯನ್ನು ಉತ್ತೇಜಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ತಮ್ಮಣ್ಣ ಶೆಟ್ಟಿ, ಕಾರ್ಯದರ್ಶಿ ಜಗದೀಶ್ ಎನ್., ಸಂಘಟನಾ ಕಾರ್ಯದರ್ಶಿ ವೆಂಕಟೇಶ್, ನಿರ್ದೇಶಕ ಸಲೀಂ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ರಾಯರಕೊಪ್ಪಲಿನಲ್ಲಿ ಆರೋಗ್ಯ ರಕ್ಷಾ ಸದಸ್ಯತ್ವ ಗುರುತಿನ ಕಾರ್ಡ್ ವಿತರಣೆ

# ಮಾತೃ ಸ್ಮರಣೆಯಲ್ಲಿ ಮಹಿಳಾ ಆರೋಗ್ಯಕ್ರಾಂತಿ

• ಪ್ರಜೋದಯ ವರದಿ

**ಆಲೂರು:** ಮಹಿಳೆಯರ ಆರೋಗ್ಯವೇ ಕುಟುಂಬದ ಸೌಭಾಗ್ಯ ಎಂದು ಹಾಸನ ಮಲೆನಾಡು ನರ್ಸಿಂಗ್ ಹೋಮ್‌ನ ಸ್ತ್ರೀರೋಗ ತಜ್ಞೆ ಡಾ. ಸಾವಿತ್ರಿ ತಿಳಿಸಿದರು.




ರಾಯರಕೊಪ್ಪಲಿನಲ್ಲಿ ರಾಧಮ್ಮ ಜನಸ್ಪಂದನ ವೇದಿಕೆ ಅಧ್ಯಕ್ಷ ಹೇಮಂತ್‌ಕುಮಾರ್ ಅವರು ತಮ್ಮ ತಾಯಿ ರಾಧಮ್ಮ ಅವರ ಸ್ಮರಣಾರ್ಥ ಏರ್ಪಡಿಸಲಾಗಿದ್ದ ಆರೋಗ್ಯ ರಕ್ಷಾ ಸದಸ್ಯತ್ವ ಗುರುತಿನ ಕಾರ್ಡ್ ವಿತರಿಸಿ ಮಾತನಾಡಿ, ಗ್ರಾಮೀಣ ಭಾಗದ ಮಹಿಳೆಯರಲ್ಲಿ ಕ್ಯಾನ್ಸರ್ ಮತ್ತು ಹಾರ್ಮೋನ್ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುತ್ತಿರುವ ರಾಧಮ್ಮ ಜನಸ್ಪಂದನ ಸಮಿತಿಯ ಕಾರ್ಯವನ್ನು ಶ್ಲಾಘಿಸಿದರು.

ಮಲೆನಾಡು ನರ್ಸಿಂಗ್ ಹೋಮ್ ಸಹಯೋಗದೊಂದಿಗೆ ಈ ಯೋಜನೆ ಜಾರಿಯಾಗುತ್ತಿದ್ದು, ಹೆಲ್ತ್ ಕಾರ್ಡ್ ಹೊಂದಿರುವ ಮಹಿಳೆಯರಿಗೆ ಕ್ಯಾನ್ಸರ್ ತಡೆಗಟ್ಟುವ ಉದ್ದೇಶದಿಂದ ಗರ್ಭಕಂಠದ ಕ್ಯಾನ್ಸರ್ ಪತ್ತೆಗೆ ಉಚಿತ ಎಚ್‌ಪಿವಿ ಡಿಎನ್‌ಎ ಪರೀಕ್ಷೆ, ಸ್ತನ ಕ್ಯಾನ್ಸರ್ ಸ್ಕ್ಯಾನಿಂಗ್, ರಕ್ತ ಪರೀಕ್ಷೆ, ಹಾರ್ಮೋನ್ ವ್ಯತ್ಯಾಸ ಮತ್ತು ರಕ್ತಹೀನತೆ ಪತ್ತೆಗಾಗಿ ಉಚಿತ ಥೈರಾಯ್ಡ್ ಮತ್ತು ಹಿಮೋಗ್ಲೋಬಿನ್ ಪರೀಕ್ಷೆ ನಡೆಸಲಾಗುವುದು ಎಂದರು.

ಸಂಸ್ಥೆಯ ಸಂಸ್ಥಾಪಕ ಹೇಮಂತ್ ಕುಮಾರ್ ಮಾತನಾಡಿ, ನನ್ನ ತಾಯಿ ಕಲಿಸಿದ ಸಂಸ್ಕಾರವೇ ಈ ಸೇವೆಗೆ ಮೂಲ ಪ್ರೇರಣೆ. ಈಗಿನ ಕಾಲದಲ್ಲಿ ಮಹಿಳೆ ಆರೋಗ್ಯವಾಗಿದ್ದರೆ ಇಡೀ ಕುಟುಂಬವೆ ಆರೋಗ್ಯವಾಗಿರುತ್ತದೆ. ಆರ್ಥಿಕವಾಗಿ ಸಂಕಷ್ಟದಲ್ಲಿರುವ ಮಹಿಳೆಯರು ಈ ಸೌಲಭ್ಯದ ಪ್ರಯೋಜನ ಪಡೆಯಬೇಕು. ಮಹಿಳೆಯರಿಗೆ ಅವಶ್ಯಕತೆವಿದ್ದರೆ ಗರ್ಭಕೋಶದ ಶಸ್ತ್ರಚಿಕಿತ್ಸೆಯನ್ನು ರಾಧಮ್ಮ ಜನಸ್ಪಂದನದ ಹೆಲ್ತ್ ಕಾರ್ಡ್ ಮುಖಾಂತರ ಖಾಸಗಿ ಆಸ್ಪತ್ರೆಯಲ್ಲಿ ಉಚಿತವಾಗಿ ಮಾಡಿಸಿ ಕೊಡಲಾಗುವುದು. ಕಳೆದ ಒಂದು ವರ್ಷದಿಂದ ತಾಲೂಕಿನ ಸರ್ಕಾರಿ ಶಾಲೆಯ ಹೆಣ್ಣು ಮಕ್ಕಳಿಗೆ ಉಚಿತವಾಗಿ ನಮ್ಮ ಸಂಸ್ಥೆಯಿಂದ ಎಚ್ಪಿವಿ ಗರ್ಭಕೋರಳ ಕ್ಯಾನ್ಸರ್ ಲಸಿಕೆಯನ್ನು ಹಾಕಿಸಲಾಗಿದೆ ಎಂದರು.

ಪರಿಸರ ಸಂರಕ್ಷಣಾ ರಾಜ್ಯ ಸಂಯೋಜಕರಾದ ಜಯರಾಮು ಬೊಳ್ಳಾಜೆ, ಪ್ರತಿಯೊಬ್ಬ ಮಹಿಳೆಯರು ಕೌಟುಂಬಿಕ ಒತ್ತಡದಲ್ಲಿ ಆರೋಗ್ಯವನ್ನು ನಿರ್ಲಕ್ಷಿಸುತ್ತ ತಮ್ಮ ಸಾವಿನ ಅಂಚಿಕೆ ತೆಗೆದುಕೊಳ್ಳುವ ಅಪಾಯವನ್ನು ಹೇಮಂತ್ ಕುಮಾರ್ ಅರಿತು ಇಂಥ ಕಾರ್ಯಕ್ರಮದ ಮುಖಾಂತರ ನಿಮ್ಮೆಲ್ಲರ ಜೀವನಕ್ಕೆ ಆರೋಗ್ಯವೇ ನಿಜವಾದ ಆಸ್ತಿ ಎಂದು ಮಾಡುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲಾ ಆಶಾ ಕಾರ್ಯಕರ್ತರಿಗೂ ಬಾಗಿನ ಕೊಡಲಾಯಿತು. ಕಾರ್ಗೋಡು ಗ್ರಾ.ಪಂ. ಪಿಡಿಓ ಸಣ್ಣಪ್ಪ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಅನಿಲ್, ಪೂವಯ್ಯ, ಗ್ರಾ.ಪಂ. ಸದಸ್ಯ ರವಿ ಮತ್ತಿತರರು ಉಪಸ್ಥಿತರಿದ್ದರು.

## ಗ್ಯಾಸ್ ಆತಂಕ: ಇನ್ನೆರಡು ದಿನಗಳಲ್ಲಿ ಸಹಜ ಸ್ಥಿತಿಗೆ

• ಪ್ರಜೋದಯ ವರದಿ

**ಬೆಂಗಳೂರು:** ಎಲ್‌ಪಿಜಿ ಹೊತ್ತ ಹಡಗುಗಳು ಇರಾನ್‌ನ ಜಲಸಂಧಿಯಿಂದ ಭಾರತಕ್ಕೆ ಬರುತ್ತಿದ್ದು, ತೈಲ ಬಿಕ್ಕಟ್ಟು ನಿವಾರಣೆಯಾಗುತ್ತಿದೆ. ಕಳೆದ ಮೂರ್ನಾಲ್ಕು ದಿನಗಳಿಂದ ಉಲ್ಬಣಗೊಂಡಿದ್ದ ಸಿಲಿಂಡರ್ ಸಮಸ್ಯೆ ಸಹಜ ಸ್ಥಿತಿಯತ್ತ ಮರಳುತ್ತಿದೆ. ಮಧ್ಯ ಪ್ರಾಚ್ಯ ದೇಶಗಳಲ್ಲಿ ಯುದ್ಧ ಸಂಘರ್ಷದಿಂದ ಇಂಧನ ಗ್ಯಾಸ್ ಕೊರತೆಯಿಂದ ಹೋಟೆಲ್‌ಗಳು, ಹಾಸ್ಟೆಲ್‌ಗಳು, ಪಿಜಿ, ದೇವಸ್ಥಾನಗಳು, ಗೃಹ ಬಳಕೆಯ ಸಿಲಿಂಡರ್‌ಗಳಿಗೂ ಕೊರತೆ ಉಂಟಾಗಿತ್ತು.



ಗ್ಯಾಸ್ ಅಭಾವ ತಲೆದೋರುತ್ತದೆ ಎಂಬ ಹಿನ್ನೆಲೆಯಲ್ಲಿ ಜನ ಮುಗಿಬಿದ್ದು ಬುಕ್ಕಿಂಗ್ ಮಾಡಲು ಶುರುವಿಟ್ಟುಕೊಂಡಿದ್ದರು. ಗ್ಯಾಸ್ ಏಜೆನ್ಸಿಗಳ ಮುಂದೆ ಕ್ಯೂ ನಿಂತು ಗ್ಯಾಸ್ ಪಡೆಯಲು ಮುಂದಾಗಿದ್ದರು. ಇಂದಿರಾ ಕ್ಯಾಂಟೀನ್‌ಗಳಲ್ಲೂ ಕೂಡ ಗ್ಯಾಸ್ ಅಭಾವ ತಲೆದೋರಿತ್ತು.

ಆಹಾರ ಸಚಿವ ಮುನಿಯಪ್ಪ ಅವರು ಎಲ್ಲ ಅನಿಲ ಕಂಪನಿಗಳು, ಹೋಟೆಲ್ ಮಾಲೀಕರೊಂದಿಗೆ ತುರ್ತು ಸಭೆ ನಡೆಸಿದ್ದರು. ಅನಿಲ ಕಂಪನಿಗಳ ಅಧಿಕಾರಿಗಳು ಆದ್ಯತೆ ಮೇರೆಗೆ ಗ್ಯಾಸ್ ಸರಬರಾಜು ಮಾಡುವುದಾಗಿ ಭರವಸೆ ನೀಡಿದ್ದರು.

ನಿನ್ನೆಯಷ್ಟೇ ಹಾರ್ಮುಜ್ ಜಲಸಂಧಿಯಿಂದ ಇಂಧನ ಹೊತ್ತ ಹಡಗು ಮುಂಬೈ ತಲುಪಿತ್ತು. ಎಲ್‌ಪಿಜಿ ಹೊತ್ತ ಇನ್ನೂ ಎರಡು ಹಡಗುಗಳು ಭಾರತಕ್ಕೆ ಆಗಮಿಸಲಿದ್ದು, ಗ್ಯಾಸ್ ಸಮಸ್ಯೆ ನಿವಾರಣೆಯಾಗಲಿದೆ. ಇನ್ನೆರಡು ದಿನಗಳಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಲಿದೆ. ಎಂದಿನಂತೆ ಹೋಟೆಲ್, ಹಾಸ್ಟೆಲ್, ದೇವಾಲಯ, ಮದುವೆ ಮಂಟಪ ಮತ್ತಿತರ ಚಟು ವಟಿಕೆಗಳ ಪದಾರ್ಥಗಳ ತಯಾರಿಕೆಗೆ ಗ್ಯಾಸ್ ಸರಬರಾಜು ಆಗುವ ಸಾಧ್ಯತೆ ಇದೆ.

ನವದೆಹಲಿಯಲ್ಲಿ ವಿವಿಧ ಸಚಿವಾಲಯಗಳ ನಡುವಿನ ಚರ್ಚೆ ನಂತರ ಹಿರಿಯ ಅಧಿಕಾರಿಗಳೇ ದೇಶದಲ್ಲಿ ತೈಲ ಮತ್ತು ಅನಿಲ ಪೂರೈಕೆ ಬಗ್ಗೆ ಮಹತ್ವದ ಮಾಹಿತಿ ನೀಡಿದ್ದಾರೆ.

50 ಲಕ್ಷ ದೇಶೀಯ ಎಲ್‌ಪಿಜಿ ಸಿಲಿಂಡರ್‌ಗಳು ಪೂರೈಕೆಯಾಗುತ್ತಿವೆ. ಇಂಧನ ಪೂರೈಕೆ ಸ್ಥಿರವಾಗಿದೆ. ಪೆಟ್ರೋಲ್ ಬಂಕ್‌ಗಳು ಕೂಡ ಎಂದಿನಂತೆ ಕಾರ್ಯನಿರ್ವಹಿಸುತ್ತಿವೆ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

C M Y K C M Y K C M Y K C M Y K